ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಮೈಸೂರು

Karnataka State Dr. Gangubai Hangal Music And Performing Arts University

Mysuru

ಲೆಕ್ಕ ತಪಾಸಣಾ ವರದಿ

Audit Report

2016–17

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಮೈಸೂರು

ಲೆಕ್ಕ ತಪಾಸಣಾ ವರದಿ
2016–17

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

2016–17ನೇ ವರ್ಷದ ಲೆಕ್ಕ ತಪಾಸಣಾ ವರದಿ ಉತ್ತರಗಳನ್ನು ತಡವಾಗಿ ಸಲ್ಲಿಸುತ್ತಿರುವ ಕುರಿತು ಟಿಪ್ಪಣಿ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರಾದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ 2009 ರೀತ್ಯ ಲೆಕ್ಕಪರಿಶೋಧನಾ ವರದಿಯನ್ನು ರಾಜ್ಯ ವಿಧಾನ ಮಂಡಲ ಹಾಗೂ ವಿಧಾನ ಪರಿಷತ್‌ನಲ್ಲಿ ಮಂಡಿಸಬೇಕಾಗಿದೆ. ಅಪರ ನಿರ್ದೇಶಕರು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಮೈಸೂರು ಇವರು 2016–17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ತಯಾರಿಸಿ ದಿನಾಂಕ: 25.02.2019 ರಲ್ಲಿ ಪತ್ರ ಸಂಖ್ಯೆ: ಅನಿ/ಪ್ರಾಂ.ಕ.ಮೈ/ಸಿಬ್ಬಂದಿ/ ಲೆ.. ತ.ವ/2018–19/2853–54 ರಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಎಲ್ಲಾ ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ ಉತ್ತರ ತಯಾರಿಸಲಾಗಿದ್ದು ಸದರಿ ಲೆಕ್ಕ ಪರಿಶೋಧನಾ ವರದಿಯನ್ನು ದಿನಾಂಕ: 10.04.2019 ರಲ್ಲಿ 16ನೇ ಹಣಕಾಸು ಸಮಿತಿ ಮತ್ತು ದಿನಾಂಕ : 10.04.2019 ರಂದು ನಡೆದ 27 ನೇ ಪ್ರಶಾಸನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

2016–17 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಉತ್ತರ ಸಮೇತ ಮುದ್ರಣ ಮಾಡಲು ಮುದ್ರಣಾಲಯಕ್ಕೆ ಪತ್ರದ ಮೂಲಕ ಸಲ್ಲಿಸಲಾಯಿತು. ಮುದ್ರಣಗೊಂಡ ವರದಿಯನ್ನು ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಮಂಡಿಸಲು ಸಲ್ಲಿಸಲಾಗಿದೆ.

ಸಹಿ/–

ಕುಲಸಚಿವರು

2016–17 ನೇ ಸಾಲಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಆಕ್ಷೇಪಣೆ ಹಾಗೂ ವಸೂಲಾತಿಯ ವಿವರಗಳು

ಕ್ರಮ ಸಂಖ್ಯೆ	ಕಂಡಿಕೆ ಸಂಖ್ಯೆ	ಕಂಡಿಕೆವಾರು ವಿವರ	ಆಕ್ಷೇಪಣೆ ಮೊಬಲಗು ರೂ. ಗಳಲ್ಲಿ	ವಸೂಲಾತಿ ಮೊಬಲಗು ರೂ. ಗಳಲ್ಲಿ
1.	1	ಹಿಂದಿನ ಆಡಿಟ್ ವರದಿಯ ಕಂಡಿಕೆಗಳಿಗೆ ಸಮರ್ಪಕ ಪಾಲನಾ ವರದಿ ಸಲ್ಲಿಸದೆ ಇರುವುದು	–	–
2.	2	ಆರ್ಥಿಕ ಪರಿಸ್ಥಿತಿ ಕುರಿತು.	–	–
3	2 (ಎ)	ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ರಾಜ್ಯದ ವಿವಿಧ ಸಂಗೀತ ಕಾಲೇಜುಗಳ ಸೇರ್ಪಡೆಗೊಳ್ಳುವ ಕುರಿತು.	–	–
4	3	ದಿ : 31.03.2017 ಕ್ಕೆ ಬ್ಯಾಂಕ್ ಖಾತೆಗಳಲ್ಲಿರುವ ಅಂತಿಮ ಶಿಲ್ಕಿನ ವಿವರ	–	–
5	4.	ನಗದಾಗದ ಧನಾದೇಶಗಳ ವಿವರ	–	–
6	5.	ರಾಷ್ಟ್ರೀಕೃತ ಬ್ಯಾಂಕ್‌ಗಳ ದರಪಟ್ಟಿ ಆಹ್ವಾನಿಸದೆ ಕಡಿಮೆ ಬಡ್ಡಿ ದರಕ್ಕೆ ಠೇವಣಿ ತೊಡಗಿಸಿರುವುದು	–	3,76,355
7	6	ಆಯವ್ಯಯ ಅಂದಾಜು	–	–
8	7	ಮಂಜೂರಾಗಿರುವ ಅನುದಾನದ ವಿವರ	–	–
9.	8	ಭೌತಿಕ ನಗದು ಪರಿಶೀಲನೆ	–	–
10.	9	ಬಳಕೆಯಾಗಿರುವ ರಶೀದಿ ಪುಸ್ತಕಗಳ ವಿವರ	–	–
11.	10	ಅಳತೆ ಪುಸ್ತಕಗಳ ದಾಸ್ತಾನು ಪರಿಶೀಲನೆ	–	–
12	11	ಅಂಕಪಟ್ಟಿಗಳ ದಾಸ್ತಾನು ಪರಿಶೀಲನೆ	–	–
13	12	ಅಂಚೆ ಸೇವಾ ಚೀಟಿ ಪರಿಶೀಲನೆ	–	–
14	13	ಸರ್ಟಿಫಿಕೇಟ್ ಕೋರ್ಸ್ ಪ್ರವೇಶಾತಿ ವಿವರ	–	–
15	14	2016–17 ನೇ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗಗಳು, ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿವರ.	–	–

16	15	ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಯಾಗದಿರುವುದು	58200	–
17	16	ಕುಲಪತಿಗಳು, ಸಂಗೀತ ವಿಶ್ವವಿದ್ಯಾನಿಲಯರವರಿಗೆ ನಿಗದಿಪಡಿಸಿದ ಮನೆ ಬಾಡಿಕೆ ಭತ್ಯೆಕ್ಕಿಂತ ಹೆಚ್ಚುವರಿಯಾಗಿ ಪಾವತಿಸಿರುವುದು.	–	1,30,000
18	17	ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳ ವಿವರ	–	–
19	18	ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಗೂ ತಾತ್ಕಾಲಿಕ ಸಾಥಿದಾರರುಗಳನ್ನು ನೇಮಕಾತಿ ಮಾಡಿಕೊಂಡು ವೇತನ ಪಾವತಿಸಿರುವ ವಿಚಾರ	90,95,873	–
20	19	ಕಛೇರಿಯ ಇಲಾಖಾ ಮುಖ್ಯಸ್ಥರಿಗೆ ಅನುಮೋದನೆ ಆದೇಶವಿಲ್ಲದೆ ಗೃಹಪರಿಚಾರಕ ಭತ್ಯೆ ಪಾವತಿಸಿರುವುದು.	–	60,000
21	20	ವಿಶ್ವವಿದ್ಯಾಲಯ ಕುಲಪತಿ / ಕುಲಸಚಿವರ ಮೇಲೆ ಮಾಡಲಾದ ದಾವೆಗಳಿಗೆ ಪ್ರತಿನಿಧಿಸಿದ್ದ ವಕೀಲರಿಗೆ ಸಂಭಾವನೆ ಪಾವತಿಸಿರುವ ವಿಚಾರ.	1,18,000	–
22	21	ಕೆ.ಸಿ.ಎಸ್.ಆರ್ ನಿಯಮ ಉಲ್ಲಂಘಿಸಿ ಪ್ರಯಾಣ ಭತ್ಯೆಯನ್ನು ಪಾವತಿಸಿರುವ ಕುರಿತು.	–	75,534
23	22	ಪರೀಕ್ಷಾ ಖಾತೆಗೆ ಸಂಬಂಧಿಸಿದಂತೆ ವಿವಿಧ ಭತ್ಯೆಗಳನ್ನು ವಿಶ್ವವಿದ್ಯಾಲಯದಲ್ಲಿ ನಿಗದಿಗೊಳಿಸದೆ ಪಾವತಿಸಿರುವ ಕುರಿತು.	7,900	–
24	23	ವಿಶ್ವವಿದ್ಯಾಲಯ ಸ್ನಾತಕ, ಸ್ನಾತಕೋತ್ತರ ಹಾಗೂ ಡಿಪ್ಲೊಮಾ ಕೋರ್ಸುಗಳ ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ, ಘಟಿಕೋತ್ಸವ ಶುಲ್ಕ ಪಾವತಿಸಿರುವ ಕುರಿತು.	–	–
25	24	ಅಭಿವೃದ್ಧಿ ಅನುದಾನ ಖಾತೆಗೆ ಸಂಬಂಧಿಸಿದ ಮುಂಗಡ ಬಿಲ್ಲುಗಳಲ್ಲಿ ಕಂಡುಬಂದಿರುವ ನ್ಯೂನತೆಗಳು	51,500	–
26	25	2016–17 ನೇ ಸಾಲಿನಲ್ಲಿ ಭದ್ರತಾ ಸಿಬ್ಬಂದಿಗಳ ವೇತನ ಪಾವತಿ ಬಿಲ್ಲುಗಳಲ್ಲಿ ಕಂಡುಬಂದಿರುವ ನ್ಯೂನತೆಗಳು	9,62,198	–
27	26	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆಯ ಎನ್.ಡಿ.ಸಿ ಬಿಲ್ಲುಗಳಿಗೆ ಹೆಚ್ಚುವರಿ ಮೊತ್ತಕ್ಕೆ ಹೊಂದಾಣಿಕೆ ಮತ್ತು ಖರ್ಚು ಭರಿಸಿರುವ ಕುರಿತು	16,162	–
28	27	ವಿಶ್ವವಿದ್ಯಾಲಯ ಪ್ರಶಿಕ್ಷಣ ಪರಿಷತ್ ಸಭೆಯಲ್ಲಿ ಭಾಗವಹಿಸಲು ಸ್ವಂತ ವಾಹನದಲ್ಲಿ ಆಗಮಿಸಿದ ಸದಸ್ಯರುಗಳಿಗೆ ಹೆಚ್ಚುವರಿ ಪ್ರಯಾಣಭತ್ಯೆ ಪಾವತಿಸಿರುವುದು.	–	10,818

29	28	ಮುಂಗಡ ಪಡೆದ ಎ.ಸಿ ಬಿಲ್ಲುಗಳ ಓಚರ್‌ಗಳು ಮತ್ತು ಎನ್.ಡಿ.ಸಿ ಬಿಲ್ಲುಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸದಿರುವುದು	2,73,875	–
30	29	ಎ.ಸಿ ಬಿಲ್ಲುಗಳ ಮೂಲಕ ಪಡೆದ ಮುಂಗಡ ಹಣಕ್ಕೆ ಎನ್.ಡಿ.ಸಿ ಬಿಲ್ಲುಗಳನ್ನು ವಿಳಂಬವಾಗಿ ಸಲ್ಲಿಸಿರುವುದು	–	–
31	30	ಗ್ರಂಥಾಲಯಕ್ಕೆ ಖರೀದಿಸಿದ ಪುಸ್ತಕಗಳ ಮೂಲ ಬಿಲ್ಲಿನ ಪ್ರತಿಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದಿರುವುದು	6,200	–
32	31	ಸ್ಥಿರ ಆಸ್ತಿಗಳ ವಿವರ ಹಾಗೂ ಆಸ್ತಿ ತೆರಿಗೆ ಪಾವತಿ ಬಗ್ಗೆ	–	–
33	32	ವಾಹನಗಳ ಕೆ.ಜಿ.ಐ.ಡಿ ವಿಮೆಯನ್ನು ಪಾವತಿಸಿಲ್ಲದಿರುವ ಕುರಿತು.	–	–
		ಒಟ್ಟು ಮೊತ್ತ ರೂ.	**1,05,89,908**	**6,52,707**

ಸಹಿ/–
ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಮೈಸೂರು
2016–17 ನೇ ಸಾಲಿನ ಲೆಕ್ಕತಪಾಸಣೆ ಕೈಗೊಂಡ ವರದಿ

ಸಾಮಾನ್ಯ ಮಾಹಿತಿ :

1	ಲೆಕ್ಕತಪಾಸಣೆಯ ಸಂಸ್ಥೆಯ ಹೆಸರು	ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು
2	ಲೆಕ್ಕತಪಾಸಣೆಯ ಅವಧಿ	01.04.2016 ರಿಂದ 31.03.2017 2016–17 ನೇ ಸಾಲು
3	ಕುಲಪತಿಗಳು	ಶ್ರೀಮತಿ ಸರ್ವಮಂಗಳಾ ಶಂಕರ್ 01.04.2016 ರಿಂದ 31.03.2017
4	ಕುಲಸಚಿವರು (ಆಡಳಿತ)	1. ಶ್ರೀ ಪ್ರೊ. ರಂಗಸ್ವಾಮಿ 01.04.2016 ರಿಂದ 18.06.2016 2. ಶ್ರೀ ನಿರಂಜನ 19.08.2016 ರಿಂದ 31.03.2017
5	ಕುಲಸಚಿವರು (ಪರೀಕ್ಷಾಂಗ)	1. ಪ್ರೊ. ಎಂ.ಎಸ್.ಶೇಖರ್ 01.04.2016 ರಿಂದ 18.07.2016 2. ಡಾ. ಸರ್ವಮಂಗಳಾ ಶಂಕರ್ 18.07.2016 ರಿಂದ 23.09.2016 3. ಪ್ರೊ. ನಿರಂಜನ 23.09.2016 ರಿಂದ 31.03.2017
6	ಹಣಕಾಸು ಅಧಿಕಾರಿಗಳು	ಶ್ರೀ ಬಸವರಾಜು ಬಿ 01.04.2016 ರಿಂದ 30.07.2016 ಶ್ರೀಮತಿ ವಿ.ಎಸ್. ರೇಣು (ಪ್ರಭಾರ) 01.08.2016 ರಿಂದ 09.02.2017 ಶ್ರೀಮತಿ ಎಂ.ಎಸ್.ಪದ್ಮಿನಿ 10.02.2017 ರಿಂದ 12.03.2017 ಶ್ರೀಮತಿ ವಿ.ಎಸ್.ರೇಣು (ಪ್ರಭಾರ) 12.03.2017 ರಿಂದ 31.03.2017
7	ಸಹಾಯಕ ಕಾರ್ಯಪಾಲಕ ಅಭಿಯಂತರರು	ಶ್ರೀ ಪಿ.ಬಸಪ್ಪ 01.04.2016 ರಿಂದ 30.04.2016 ಶ್ರೀ ಬಿ.ಕೆ.ರಾಮಮೂರ್ತಿ 01.05.2016 ರಿಂದ 31.03.2017
8	ಲೆಕ್ಕ ಅಧೀಕ್ಷಕರು	ಶ್ರೀಮತಿ ವಿ.ಎಸ್.ರೇಣು 01.04.2016 ರಿಂದ 31.03.2017
9	ಲೆಕ್ಕ ತಪಾಸಣೆಯ ಪ್ರಾರಂಭದ ದಿನಾಂಕ	11.09.2018
10	ಲೆಕ್ಕತಪಾಸಣೆ ಮುಕ್ತಾಯ ದಿನಾಂಕ	05.10.2018
11	ತಪಾಸಣೆಗೆ ತೆಗೆದುಕೊಂಡ ಒಟ್ಟು ಮಾನವ ದಿನಗಳು	66

12	ಲೆಕ್ಕ ತಪಾಸಣೆಯ ತಂಡದವರ ಹೆಸರು ಮತ್ತು ಪದನಾಮ	1. ಶ್ರೀಮತಿ ಬಿ.ಎನ್.ಸುಮಿತ್ರ, ಲೆಕ್ಕಪರಿಶೋಧನಾಧಿಕಾರಿ 2. ಶ್ರೀಮತಿ ಸಿ. ನಿರ್ಮಲಕುಮಾರಿ, ಲೆಕ್ಕಾಧೀಕ್ಷಕರು 3. ಶ್ರೀ ಕೃಷ್ಣ, ಲೆಕ್ಕಪರಿಶೋಧಕರು 4. ಶ್ರೀಮತಿ ಸೌಮ್ಯ, ಲೆಕ್ಕಪರಿಶೋಧಕರು
13	ಲೆಕ್ಕ ತಪಾಸಣೆ ವರದಿಯ ಪುನರ್ ಪರಿಶೀಲನಾಧಿಕಾರಿಗಳ ಹೆಸರು ಮತ್ತು ಪದನಾಮ	ಶ್ರೀಮತಿ ಬಿ.ಜಿ. ಇಂದಿರಮ್ಮ, ಕೆ.ಎಸ್.ಇ.ಎಸ್ ಅಪರ ನಿರ್ದೇಶಕರು ಪ್ರಾಂತೀಯ ಕಚೇರಿ ಮೈಸೂರು ವಿಭಾಗ, ಮೈಸೂರು
14	ಲೆಕ್ಕ ತಪಾಸಣೆಯ ವರದಿಯ ಪುನರ್ ಪರಿಶೀಲಿಸಿದ ದಿನಾಂಕ	27.12.2018

ಭಾಗ – 1

1. ಹಿಂದಿನ ಆಡಿಟ್ ವರದಿಯ ಕಂಡಿಕೆಗಳಿಗೆ ಸಮರ್ಪಕ ಅನುಪಾಲನಾ ವರದಿ ಸಲ್ಲಿಸದೆ ಇರುವುದು :

2016–17ನೇ ಸಾಲಿನ ತಪಾಸಣೆಯ ಅವಧಿಯಲ್ಲಿ ಹಾಜರುಪಡಿಸಿರುವ ಹಿಂದಿನ ವರ್ಷದ ಆಡಿಟ್ ವರದಿ (2015–16) ರಲ್ಲಿ ಸೂಚಿಸಿರುವಂತೆ ಆಡಿಟ್ ಕಂಡಿಕೆಗಳು ಬಾಕಿ ಉಳಿದಿರುವ ಆಕ್ಷೇಪಣೆ ಹಾಗೂ ವಸೂಲಾತಿಯನ್ನು ಅನುಬಂಧ – 1 ರಲ್ಲಿ ತಿಳಿಸಿರುವಂತೆ ಅನುಪಾಲನಾ ವರದಿ ನೀಡಿದೆ ಹಿಂದಿನ ಸಾಲುಗಳಿಂದಲೂ ಬಾಕಿ ಉಳಿದಿರುವ ಕಂಡಿಕೆಗಳ ತೀರುವಳಿಗೆ ಪಾಲನಾ ವರದಿ ಸಲ್ಲಿಸಲು ಸೂಚಿಸಿದೆ.

ಕ್ರ.ಸಂ	ವರ್ಷ	ಬಾಕಿ ಉಳಿದಿರುವ ಆಕ್ಷೇಪಣೆ ಕಂಡಿಕೆಗಳು		ಬಾಕಿ ಉಳಿದಿರುವ ವಸೂಲಾತಿ ಕಂಡಿಕೆಗಳು	
1.	2008–09 ರಿಂದ 2011–12 ರವರೆಗೆ	08	10422488	05	4994337
2.	2012–13	10	4764533	05	232393
3	2013–14	11	7257626	10	185659
4	2014–15	10	68173880	08	420904
5	2015–16	30	1600869	06	836129
	ಒಟ್ಟು	**69**	**92219396**	**34**	**6673921**

ಭಾಗ – 2

1. ಅನುಮೋದನೆಗೊಂಡಿರುವ ವಾರ್ಷಿಕ ಲೆಕ್ಕಪತ್ರ

2016–17 ನೇ ಸಾಲಿನ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 2009 ರ ಅಧಿನಿಯಮದ 25ರ ಕಲಂ 49 (1) ಮತ್ತು (2) ರ ಪ್ರಕಾರ ಸಿಂಡಿಕೇಟ್‌ನಿಂದ ಅಂಗೀಕೃತಗೊಂಡ ದಿನಾಂಕ : 23.05.2016/2016–17 ರ ವರ್ಷದ ವಾರ್ಷಿಕ ಲೆಕ್ಕಪತ್ರದ ಪ್ರತಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಲಾಗಿದೆ. ದಿನಾಂಕ : 16.13.2016 ರಂದು ನಡೆದ ಹಣಕಾಸು ಸಮಿತಿಯಿಂದ ಅನುಮೋದಿಸಿರುವ ವರದಿಯಂತೆ ನೀಡಲಾಗಿದೆ. ವಿವರವನ್ನು ಅನುಬಂಧ –2 ರಲ್ಲಿ ನೀಡಿದೆ.

2. ಆರ್ಥಿಕ ಪರಿಸ್ಥಿತಿ ಕುರಿತು :

2016–17ನೇ ಸಾಲಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ವಿವಿಧ ಬ್ಯಾಂಕ್ ಖಾತೆಗಳಲ್ಲಿ ವ್ಯವಹರಿಸಿರುವ ಆರ್ಥಿಕ ಪರಿಸ್ಥಿತಿ ಹಾಗೂ ವಾರ್ಷಿಕ ಲೆಕ್ಕಪತ್ರದಂತೆ ಆರ್ಥಿಕ ಪರಿಸ್ಥಿತಿ ವಿವರ ಕೆಳಕಂಡಂತಿದೆ.

ದಿನಾಂಕ : 01.04.2016 ಕ್ಕೆ ಪ್ರಾರಂಭ ಶಿಲ್ಕು ರೂ.	69762464
2016–17 ನೇ ಸಾಲಿನ ಸ್ವೀಕೃತಿ ಮತ್ತು ಜಮೆ ರೂ.	57475725
ಒಟ್ಟು ರೂ.	**127238189**
2016–17 ನೇ ಸಾಲಿನ ಖರ್ಚು ರೂ.	42635332
ದಿನಾಂಕ : 31.03.2017 ರಂದು ಅಂತಿಮ ಶಿಲ್ಕು ರೂ.	**84602857**

2 (ಎ) ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ರಾಜ್ಯದ ವಿವಿಧ ಸಂಗೀತ ಕಾಲೇಜುಗಳು ಸೇರ್ಪಡೆಗೊಳ್ಳುವ ಕುರಿತು :

1. ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಅಧಿನಿಯಮ–2009 ರಲ್ಲಿ 15.09.2019 ದಿನಾಂಕದಂದು ಮಾನ್ಯ ರಾಜ್ಯಪಾಲರ ಅನುಮೋದನೆಯೊಂದಿಗೆ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ನಿಗಮಿತಗೊಳಿಸಲು ಅಧಿನಿಯಮ ರಚಿಸಲಾಗಿದೆ. ಅಧಿನಿಯಮ ಅಧ್ಯಾಯ – I ಮತ್ತು II ರ ಪ್ರಕಾರ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ಅಧಿಕಾರ ವ್ಯಾಪ್ತಿಯ ವಿವರ ಕೆಳಕಂಡಂತಿದೆ.

1. ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ಕಲಿಕೆಯ ಮುನ್ನಡೆಯನ್ನು ಮತ್ತು ಸಂಶೋಧನೆಯ ಪುರೋಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ವಿಶ್ವವಿದ್ಯಾಲಯದ ಸ್ಥಾಪನೆಯಾಗಿರತಕ್ಕದ್ದು.
2. ವಿಶ್ವವಿದ್ಯಾಲಯವು ಏಕಘಟಕೀಯ ಮತ್ತು ನಿವಾಸಿ ಸ್ವರೂಪದ್ದಾಗಿರತಕ್ಕದ್ದು.
3. ಸರ್ಕಾರದ ಮತ್ತು ವಿಶ್ವವಿದ್ಯಾಲಯದ ಪೂರ್ವಾನುಮತಿಯೊಂದಿಗೆ ಹೊರತು ರಾಜ್ಯದಲ್ಲಿರುವ ಯಾವುದೇ ವಿಶ್ವವಿದ್ಯಾಲಯಕ್ಕೆ ಯಾವುದೇ ಉದ್ದೇಶಕ್ಕೆ ಮಾನ್ಯತೆ ನೀಡತಕ್ಕದ್ದಲ್ಲ.
4. ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲಾ ಶಾಖೆಗಳಲ್ಲಿ ಶಿಕ್ಷಣವನ್ನು ಒದಗಿಸುವುದು.
5. ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸುವುದು.
6. ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಮತ್ತು ಕೃತಿಗಳನ್ನು ಪ್ರಕಟಿಸಲು ಒಂದು ಪ್ರಸಾರಾಂಗವನ್ನು ಸ್ಥಾಪಿಸುವುದು.

ಅಧಿಕಾರಗಳು :

7. ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪಿಸತಕ್ಕದ್ದು.

8. ಪದವಿಗಳು, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು.

ಮೇಲಿನ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ಅಧಿಕಾರದ ಅಂಶಗಳನ್ನು ಗಮನಿಸಲಾಗಿ ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪಿಸಿರುವುದರಿಂದ ಮಾನ್ಯತೆ ಪಡೆದ ರಾಜ್ಯದ ಯಾವುದೇ ಶಿಕ್ಷಣ ಸಂಸ್ಥೆಗಳು ನಿರ್ವಹಿಸಲಾದ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಶೈಕ್ಷಣಿಕ ಕೋರ್ಸುಗಳಿಗೆ, ಸಂಗೀತ ವಿಶ್ವವಿದ್ಯಾಲಯದ ಪ್ರಾತಿನಿಧ್ಯ ಪಡೆದು ವಿವಿಧ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಷಯಗಳ ಪದವಿಗಳು, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪದವಿ ಪ್ರಮಾಣ ಪತ್ರ ಮತ್ತು ಪ್ರಶಸ್ತಿ, ಘಟಿಕೋತ್ಸವ ಸಮಾರಂಭಗಳು ವಿಶ್ವವಿದ್ಯಾಲಯದ ವತಿಯಿಂದಲೇ ನಿರ್ಧರಿಸುವುದು ಮತ್ತು ಕರ್ನಾಟಕದ ಎಲ್ಲಾ ಸಂಗೀತ ಮತ್ತು ಪ್ರದರ್ಶಕ ಕಾಲೇಜು ಸಂಸ್ಥೆಗಳು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವುದರಿಂದ ವಿವಿಧ ಕಾಲೇಜುಗಳಿಂದ ಸಂಯೋಜನಾ ಶುಲ್ಕ, ವಿದ್ಯಾರ್ಥಿಗಳ ಸಂಖ್ಯೆ / ಪ್ರವೇಶಾತಿ ಶುಲ್ಕಗಳು ವಿಶ್ವವಿದ್ಯಾಲಯಕ್ಕೆ ಸ್ವೀಕೃತವಾಗಿ ಸ್ಥಾಪನಾ ಉದ್ದೇಶ ಈಡೇರಿದಂತಾಗುತ್ತದೆ ಹಾಗೂ ಈ ವಿಷಯವನ್ನು ಶೈಕ್ಷಣಿಕ ಸಮಿತಿ ಸಭೆಯಲ್ಲಿ ಸಂಗೀತ ಮತ್ತು ಪ್ರದರ್ಶಕ ವಿಷಯವನ್ನು ಅನುಮೋದಿಸಿ ಸರ್ಕಾರದ ಅನುಮತಿ ಪಡೆಯತಕ್ಕದ್ದು. ಮೇಲಿನ ಎಲ್ಲಾ ಉದ್ದೇಶಗಳು ಸಫಲತೆಯಾದಲ್ಲಿ, ಒಂದು ಏಕಘಟಕೀಯ ಮತ್ತು ನಿವಾಸಿ ಸ್ವರೂಪದ ವಿಶ್ವವಿದ್ಯಾಲಯದ ಸ್ಥಾಪನೆಯ ಉದ್ದೇಶ ಯುಕ್ತವಾಗಿರುತ್ತದೆ ಎಂದು ಲೆಕ್ಕ ತನಿಖೆಯಲ್ಲಿ ಅಭಿಪ್ರಾಯಿಸಲಾಗಿದೆ.

ವಿಶ್ವವಿದ್ಯಾಲಯದ ಪ್ರವೇಶಾತಿ ವಿವರ ಗಮನಿಸಿದಾಗ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗಿದ್ದು ಸಾಧನೆಯು ಕುಂಠಿತ ಪ್ರಗತಿಯಾದಂತಾಗಿ ವಿಶ್ವವಿದ್ಯಾಲಯವು ಭರಿಸುವ ವೆಚ್ಚ ಫಲಪ್ರದವಲ್ಲದ ವೆಚ್ಚ (Unfruitfull Expenditure) ವೆಚ್ಚವಾಗಿದೆ.

3. ದಿನಾಂಕ : 31.03.2017 ಕ್ಕೆ ಬ್ಯಾಂಕ್ ಖಾತೆಗಳಲ್ಲಿರುವ ಅಂತಿಮ ಶಿಲ್ಕಿನ ವಿವರ :

ಕ್ರ.ಸಂ	ಬ್ಯಾಂಕ್ ಖಾತೆಯ ಹೆಸರು ಸಂಖ್ಯೆ	ಪ್ರಾರಂಭ ಶಿಲ್ಕು ದಿನಾಂಕ : 01.04.2016	ಠೇವಣಿ ಪ್ರಾರಂಭಿಕ ಶಿಲ್ಕು	2016–17 ಸ್ವೀಕೃತಿ	ಒಟ್ಟು ಸ್ವೀಕೃತಿ	ಠೇವಣಿ ಮರು ಹೂಡಿಕೆ	ವೆಚ್ಚ	ವಾರ್ಷಿಕ ಲೆಕ್ಕಗಳ ಪ್ರಕಾರ ಅಂತಿಮ ಶಿಲ್ಕು	ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು	ಬ್ಯಾಂಕ್ ಪಾಸ್ ಪುಸ್ತಕದ ಪ್ರಕಾರ	ವ್ಯತ್ಯಾಸ
1.	ಅಭಿವೃದ್ಧಿ ನಿಧಿ	6,70,85,898	6,86,26,789	5,52,40,103	19,09,52,790	7,85,26,789	2,95,54,649	8,28,71,352	8,28,71,352	9,34,38,210	1,05,66,858
2.	ಪರೀಕ್ಷಾ ನಿಧಿ	10,69,583	–	2,75,395	13,44,978	–	5,56,622	7,88,356	7,88,356	8,70,597	82,241
3.	ಕನ್ನಡ ಮತ್ತು ಸಂಸ್ಕೃತಿ ನಿಧಿ	9,46,544	–	57,976	10,04,520	–	10,02,775	1,745	1,745	1,67,824	1,66,079
4.	ಡೋಲು ಮತ್ತು ನಾಗಸ್ವರ ನಿಧಿ	4,64,323	–	18,13,914	22,78,237	–	13,55,752	9,22,485	9,22,485	9,24,272	1,787
5.	ದತ್ತಿ ನಿಧಿ	1,48,862	–	76,712	2,25,574	–	2,16,296	9,278	8,278	9,278	1,000
6.	NSS Regular Activities	24877	–	11011	35888	–	26325	9563	9563	9563	–
7.	NSS Special Campaign Programme	22377	–	896	23273	–	23195	78	78	78	–
	ಒಟ್ಟು	**69762464**	**68626789**	**57476007**	**195865260**	**78526789**	**32735614**	**84602857**	**84602857**	**95419822**	**10817965**

1.	**ದಿನಾಂಕ : 31.03.2017 ರಂದು ಬ್ಯಾಂಕ್ ಪಾಸ್ ಬುಕ್ ಪ್ರಕಾರ ಅಂತಿಮ ಶಿಲ್ಕು**	**9,54,19,822**
2.	**ದಿನಾಂಕ : 31.03.2017 ರಂದು ನಗದು ಪುಸ್ತಕ ಪ್ರಕಾರ ಅಂತಿಮ ಶಿಲ್ಕು**	**8,46,01,857**
	ವ್ಯತ್ಯಾಸ	**1,08,17,965**

ವ್ಯತ್ಯಾಸದ ಮೊತ್ತ ರೂ. 1,08,17,965/– ಗಳು ನಗದಾಗದ ಧನಾದೇಶಗಳಾಗಿರುತ್ತವೆ.

4. ನಗದಾಗದ ಧನಾದೇಶಗಳ ವಿವರ :

2016–17 ರ ಆರ್ಥಿಕ ವರ್ಷದಲ್ಲಿ ವಿಶ್ವವಿದ್ಯಾಲಯದ ವಿವಿಧ ಖಾತೆಗಳಲ್ಲಿ ದಿನಾಂಕ : 31.03.2017 ರ ಅಂತ್ಯಕ್ಕೆ ರೂ. 1,08,17,965/– ಗಳ ನಗದಾಗದ ಧನಾದೇಶಗಳನ್ನು ಹೊಂದಿದ್ದು, ಅವಧಿ ಮೀರಿದ ಧನಾದೇಶಗಳನ್ನು ರದ್ದು ಪಡಿಸಿ ಸ್ವೀಕೃತಿ ಪಡೆದುಕೊಂಡು ಲೆಕ್ಕಸಮನ್ವಯಗೊಳಿಸಿ ವರದಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು ಅನುಬಂಧ – 2 (ಎ) ರಲ್ಲಿ ನೀಡಿದೆ.

ಕ್ರ.ಸಂ	ಖಾತೆ ವಿವರ	ನಗದಾಗದ ಧನಾದೇಶಗಳ ಮೊತ್ತ
1	ಅಭಿವೃದ್ಧಿ ಖಾತೆ	1,05,66,858
2	ಪರೀಕ್ಷಾ ಖಾತೆ	82,241
3	ಕನ್ನಡ ಮತ್ತ ಸಂಸ್ಕೃತಿ ಖಾತೆ	1,66,079
4	ಬಿಸಿಎಂ ಖಾತೆ	1,787
5	ದತ್ತಿ ನಿಧಿ	1,000
	ಒಟ್ಟು	**1,08,17,965**

4 (ಎ) ರೂ. 32,75,063/– ಬಡ್ಡಿ ಹಣವನ್ನು ಸರ್ಕಾರಕ್ಕೆ ಹಿಂದಿರುಗಿಸದಿರುವುದು : –	**ಅನುಪಾಲನಾ ವರದಿ**
ಅಭಿವೃದ್ಧಿ ನಿಧಿಯ ಬ್ಯಾಂಕ್ ಖಾತೆ ಸಂಖ್ಯೆ : 64027069750 ರ ಆರ್ಥಿಕ ವಹಿವಾಟು ಇರುವ ಎಸ್.ಬಿ.ಐ ಬ್ಯಾಂಕ್ ಖಾತೆ ಸಂಖ್ಯೆ : 64027069750 ರಲ್ಲಿ 2016–17 ನೇ ಸಾಲಿಗೆ ರೂ. 32,75,063/– ಗಳು ಬಡ್ಡಿ ಹಣ ಖಾತೆಗೆ ಜಮೆಯಾಗಿರುತ್ತದೆ. ಖಾತೆಗೆ ಜಮೆಯಾದ ಬಡ್ಡಿ ಹಣವನ್ನು ಸರ್ಕಾರಕ್ಕೆ ಮರುಜಮೆಗೊಳಿಸಿ ವಿವರಣೆಯನ್ನು ನೀಡುವಂತೆ ಸೂಚಿಸಿದೆ.	ಬಿಡುಗಡೆಯಾದ ಹಣವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಬಡ್ಡಿ ಹಣವನ್ನು ಉಪಯೋಗಿಸಿಕೊಳ್ಳಲಾಗಿದೆ.

5. ರೂ. 3,76,355/– ಕಡಿಮೆ ಬಡ್ಡಿ ದರಕ್ಕೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದರಿಂದ ವಸೂಲಿಗೊಳಿಸುವ ಬಗ್ಗೆ. :

2016–17 ನೇ ಆರ್ಥಿಕ ವರ್ಷದ ಲೆಕ್ಕ ತಪಾಸಣೆಯ ಅವಧಿಯಲ್ಲಿ ಹಾಜರುಪಡಿಸಿರುವ ನಿಶ್ಚಿತ ಠೇವಣಿ ವಹಿಯೊಂದಿಗೆ ತಾಳೆ ಮಾಡಿದಾಗ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ದತ್ತಿ ನಿಧಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಧಿ ಇತರೆ ಮೂಲಗಳಿಂದ ಸ್ವೀಕೃತಿಯಾದ ಅನುದಾನದಲ್ಲಿ ವಿವಿಧ ಬ್ಯಾಂಕ್ ಖಾತೆಗಳಲ್ಲಿ ದಿನಾಂಕ : 31.03.2017 ರ ಅಂತ್ಯಕ್ಕೆ ರೂ. 7,21,91,178/– ಗಳ ಮೊಬಲಗನ್ನು ನಿಶ್ಚಿತ ಠೇವಣಿ ರೂಪದಲ್ಲಿ ತೊಡಗಿಸಲಾಗಿದೆ. ಠೇವಣಿ ಹೂಡುವಾಗ ಗರಿಷ್ಠ ಬಡ್ಡಿ ದರ ನೀಡುವ ಬ್ಯಾಂಕಿನಲ್ಲಿ ಠೇವಣಿಯನ್ನು ಮಾಡದೆ ಕಡಿಮೆ ಬಡ್ಡಿ ದರ ನೀಡುವ ಬ್ಯಾಂಕಿನಲ್ಲಿ ಹೂಡಿಕೆ ಮಾಡಿರುವುದು ಕಂಡುಬಂದಿದೆ. ಇದರಿಂದಾಗಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನಷ್ಠ ಉಂಟಾಗಿರುತ್ತದೆ. ಸ್ಪರ್ಧಾತ್ಮಕ ಬಡ್ಡಿದರ ನೀಡುವ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಟೆಂಡರ್/E-Acution ಕರೆದು ಹೂಡಿಕೆ ಮಾಡಿದ್ದರೆ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಬಡ್ಡಿ ಜಮೆಯಾಗಿ ಈಗ ಇದರಿಂದ ಆಗಿರುವ ಆರ್ಥಿಕ ನಷ್ಟವನ್ನು ತಪ್ಪಿಸಬಹುದಾಗಿತ್ತು. ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಿಂದ ದರಪಟ್ಟಿ ಆಹ್ವಾನಿಸಿರುವ ಬಗ್ಗೆ ಆದೇಶಗಳನ್ನು ಕಛೇರಿ ಟಿಪ್ಪಣಿಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸದಿರುವುದರಿಂದ ವಿಶ್ವವಿದ್ಯಾಲಯವು ಈ ಸಾಲಿನಲ್ಲಿ ಠೇವಣಿಯಲ್ಲಿ ತೊಡಗಿಸಿ ಗರಿಷ್ಠ ಬಡ್ಡಿ ದರವನ್ನು ಪಡೆದಿರುವ ದರಗಳನ್ನು ಲೆಕ್ಕ ಹಾಕಿ (ಶೇ. 6.75–7.6 = 0.85) ಮತ್ತು (ಶೇ. 7.00–7.6 = 0.6) ಕಡಿಮೆ ಬಡ್ಡಿ ದರದಲ್ಲಿ ತೊಡಗಿಸಲಾದ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿಯ ವ್ಯತ್ಯಾಸದ ಮೊತ್ತ ರೂ. 3,76,355/– ಗಳನ್ನು ಈ ಕೆಳಕಂಡ ರೀತಿಯಲ್ಲಿ ವಸೂಲಾತಿಗೆ ಸೂಚಿಸಿದೆ. ವಿವಿಧ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲಾದ ನಿಶ್ಚಿತ ಠೇವಣಿಗಳ ವಿವರವನ್ನು ಅನುಬಂಧ–3 ರಲ್ಲಿ ನೀಡಿದೆ.

ಠೇವಣಿ ಮೊತ್ತ	ಕಡಿಮೆ ಬಡ್ಡಿ ದರದಲ್ಲಿ ಹೂಡಿಕೆ ಮಾಡಲಾದ ವ್ಯತ್ಯಾಸದ ಬಡ್ಡಿದರ	ಕಡಿಮೆ ಬಡ್ಡಿ ದರದಿಂದ ಉಂಟಾದ ಆರ್ಥಿಕ ನಷ್ಠ
46855533	0.6	281133
167474	0.8	1340
11044972	0.85	93882
	ಒಟ್ಟು	**376355**

ಅನುಪಾಲನಾ ವರದಿ

2016–17ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ನಿಶ್ಚಿತ ಠೇವಣಿಗಳು ಫಲಪ್ರದವಾದಾಗ, ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಬಡ್ಡಿ ದರವನ್ನು ಪಡೆದು, ಅದರಂತೆ ತುಲಾನಾತ್ಮಕ ಪಟ್ಟಿ ಸಿದ್ಧಪಡಿಸಿ ಹೆಚ್ಚು ಬಡ್ಡಿ ದರವನ್ನು ನೀಡಿದ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಮರುಠೇವಣಿ ಹೂಡಲು ಕ್ರಮವಹಿಸಲಾಗಿದೆ. ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿದಂತೆ ಆರು ತಿಂಗಳಿಗೆ ಠೇವಣಿ ಹೂಡಲಾಯಿತು. ಆರು ವರ್ಷಕ್ಕೆ ಬಡ್ಡಿ ದರವು ಹಾಗೂ ಈ ಕೆಳಕಂಡ ಒಂದು ವರ್ಷಕ್ಕೆ ಠೇವಣಿ ಮಾಡಿದ ಠೇವಣಿಗಳಿಗೆ ಬಡ್ಡಿ ದರವು ಬೇರೆ ಆಗಿರುತ್ತದೆ. 2016–17 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಠೇವಣಿಗಳು ವಿವಿಧ ಅವಧಿಗಳಲ್ಲಿ ಫಲಪ್ರದವಾದಾಗ ವಿವಿಧ ಬ್ಯಾಂಕುಗಳ ಬಡ್ಡಿ ದರಕ್ಕೆ ತುಲಾನಾತ್ಮಾಕ ಪಟ್ಟಿ ತಯಾರಿಸಿ ಮರು ಠೇವಣಿಗಳ ಸಮಯದಲ್ಲಿ ಬ್ಯಾಂಕ್ ಬಡ್ಡಿ ದರವು ಬದಲಾವಣೆಗೊಂಡಿರುತ್ತದೆ. ಆದ್ದರಿಂದ ಬ್ಯಾಂಕ್ ಬಡ್ಡಿ ದರವು ವ್ಯತ್ಯಾಸವಾಗಿರುವುದರಿಂದ ಹೂಡಿಕೆಯಲ್ಲಿ ಸಹ ವ್ಯತ್ಯಾಸವಾಗಿರುತ್ತದೆ. ಈ ಅಂಶವನ್ನು ಪರಿಗಣಿಸಿ ಸದರಿ ವಿಷಯವನ್ನು ವಸೂಲಾತಿಯಿಂದ ಕೈ ಬಿಡಲು ಕೋರಲಾಗಿದೆ.

syndicate	586009	1yr	2.2.17	167474	6.8%	interest amt newly deposited
		1yr		46855533	7%	FD s are matured on different dates so interest rates will vary .
				11044972	7%	

6. ಆಯವ್ಯಯ ಅಂದಾಜು :

ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಬಜೆಟ್ ಕೈಪಿಡಿ ನಿಯಮದಲ್ಲಿ ತಿಳಿಸಿರುವಂತೆ ಆಯವ್ಯಯವನ್ನು ತಯಾರಿಸುವುದು ಸಂಸ್ಥೆಯ ಕರ್ತವ್ಯವಾಗಿರುತ್ತದೆ. ಇದರನ್ವಯ ಲೆಕ್ಕ ತಪಾಸಣಾ ಸಂದರ್ಭದಲ್ಲಿ ಪತ್ರದ ಸಂಖ್ಯೆ : ಕೆ.ಎಸ್.ಜಿ.ಹೆಚ್/ಸಂ.ಪ್ರ.ಕ.ವಿ/ಲೆ.ಶಾ/ಲೆಸ1/382/2015–16 ದಿನಾಂಕ : 07.01.2016 ರ ರೀತ್ಯಾ ಸರ್ಕಾರಕ್ಕೆ ಸಲ್ಲಿಸಿರುವ 2016–17 ನೇ ಸಾಲಿನ ಆಯವ್ಯಯದ ವಿವರ.

		ರೂ.ಲಕ್ಷಗಳಲ್ಲಿ
	ಆಯವ್ಯಯ (Budget)	**ವಾಸ್ತವಿಕ ಸ್ವೀಕೃತಿ ಮತ್ತು ವೆಚ್ಚ**
ಪ್ರಾರಂಭ ಶಿಲ್ಕು	–	698.00
2016–17 ನೇ ಸಾಲಿನ ಸ್ವೀಕೃತಿ (ಆದಾಯಗಳು)	764.00	575.00
ಒಟ್ಟು	764.00	1273.00
2016–17 ರ ಸಾಲಿನ ವೆಚ್ಚ	10582.50	426.00
ಅಂತಿಮ ಶಿಲ್ಕು	(–) 9818.50	847.00

2016–17ನೇ ಹಣಕಾಸು ವರ್ಷದಲ್ಲಿ ನಿರೀಕ್ಷಿತ ಆದಾಯಕ್ಕಿಂತ ಅಧಿಕ ವೆಚ್ಚವನ್ನು ಭರಿಸುವ (ಸಂಭವನೀಯ ವೆಚ್ಚಗಳು) ಆಯವ್ಯಯ ಅಂದಾಜನ್ನು ತಯಾರಿಸಿ ಸಲ್ಲಿಸಿರುವುದು ಹಾಗೂ ಶೇ. 10 ರಂತೆ ನಿರೀಕ್ಷಿತ ವೆಚ್ಚವನ್ನು ಆಧರಿಸಿ ಹೆಚ್ಚುವರಿಯಾಗಿ ಆಯವ್ಯಯ ಅಂದಾಜನ್ನು ತಯಾರಿಸಬೇಕಾಗಿದ್ದು, 2016–17 ನೇ ಸಾಲಿನ ಆಯವ್ಯಯ ಅಂದಾಜು ಸಂಪೂರ್ಣವಾಗಿ ನೈಜತೆಯಿಲ್ಲದಿರುವ ಕುರಿತು ಸೂಕ್ತ ಸ್ಪಷ್ಟೀಕರಣ ಒದಗಿಸುವಂತೆ ಸೂಚಿಸಿದೆ.

ವಿಶ್ವವಿದ್ಯಾಲಯವು ಪ್ರತಿ ವರ್ಷ ಆಯವ್ಯಯ ಅಂದಾಜಿನ ತಯಾರಿಕೆಯಲ್ಲಿ ಖಾಯಂ ನೌಕರರ ಪಿಂಚಣಿ ನಿಧಿಗೆ ವಂತಿಕೆಗಳನ್ನು ಅಳವಡಿಸಿಕೊಳ್ಳತಕ್ಕದ್ದು ಹಾಗೂ ವೇತನ ಮತ್ತು ಭತ್ಯೆಗಳಿಗೆ ಸ್ವೀಕೃತವಾದ ಸಹಾಯಾನುದಾನದಲ್ಲಿ ಪಿಂಚಣಿನಿಧಿ ವಂತಿಕೆ ಪ್ರತ್ಯೇಕವಾಗಿ ನಿರ್ವಹಿಸತಕ್ಕದ್ದು.

7. ಮಂಜೂರಾಗಿರುವ ಅನುದಾನದ ವಿವರ :

2016–17 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಅಭಿವೃದ್ಧಿ ನಿಧಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನಗಳ ಸಂಬಂಧದ ಅನುದಾನದ ವಹಿ (Grant Register) ಯನ್ನು ಪರಿಶೀಲಿಸಿದಾಗ ಒಟ್ಟು ರೂ. 5,00,00,000/– ಗಳ ಅನುದಾನ ಬಿಡುಗಡೆಯಾಗಿದ್ದು, ವಿವರಗಳನ್ನು ಕೆಳಕಂಡಂತೆ ವಿವರಿಸಲಾಗಿದೆ

2016–17 ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ವಿವರಣಾ ತಃಖ್ತೆ

ಲೆಕ್ಕ ಶೀರ್ಷಿಕೆ : 2205–00–101–0–08–101

ಕ್ರ.ಸಂ	ಅನುದಾನ ಬಿಡುಗಡೆಯಾಗಿರುವ ಸರ್ಕಾರದ ಆದೇಶ ಸಂಖ್ಯೆ / ದಿನಾಂಕ	ಅನುದಾನ ಬಿಡುಗಡೆಯಾಗಿರುವ ತ್ರೈಮಾಸಿಕಗಳು	ಬ್ಯಾಂಕ್ ಖಾತೆಗೆ ಹೊಂದಾಣಿಕೆಯಾದ ದಿನಾಂಕ	ಬಿಡುಗಡೆಯಾದ ಅನುದಾನಗಳ ಮೊತ್ತ
1	ಸರ್ಕಾರದ ಆದೇಶ ಸಂಖ್ಯೆ : ಇಡಿ/217/ಯುಎನ್ಇ/2016 ದಿನಾಂಕ : 23.06.2016	ಮೊದಲನೇ ತ್ರೈಮಾಸಿಕ (2016–17)	21.09.2016	12500000
2.	ಸರ್ಕಾರದ ಆದೇಶ ಸಂಖ್ಯೆ : ಇಡಿ/217/ಯುಎನ್ಇ/2016 ದಿನಾಂಕ : 18.08.2016	ಎರಡನೇ ತ್ರೈಮಾಸಿಕ (2016–17)	17.10.2016 – 25.75 13.11.2016 – 99.25	12500000
3.	ಸರ್ಕಾರದ ಆದೇಶ ಸಂಖ್ಯೆ : ಇಡಿ/217/ಯುಎನ್ಇ/2016 ದಿನಾಂಕ : 28.10.2016	ಮೂರನೇ ತ್ರೈಮಾಸಿಕ (2016–17)	11.01.2017 – 25.75 06.02.2017 – 99.25	12500000

4.	ಸರ್ಕಾರದ ಆದೇಶ ಸಂಖ್ಯೆ : ಇಡಿ/217/ಯುಎನ್ಇ/2016 ದಿನಾಂಕ : 13.01.2017	ನಾಲ್ಕನೇ ತ್ರೈಮಾಸಿಕ (2016–17)	21.02.2017 – 25.75 01.03.2017 – 99.25	12500000
			ಒಟ್ಟು	**50000000**

ಈ ಅನುದಾನದಲ್ಲಿ ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ವೇತನಕ್ಕಾಗಿ ಬಳಕೆಯಾಗಿರುತ್ತದೆ ಹಾಗೂ ಉಳಿದ ಹಣವು ಬ್ಯಾಂಕ್ ಖಾತೆಯಲ್ಲಿರುವ ಬಗ್ಗೆ ಬ್ಯಾಂಕ್ ಸ್ಟೋಲ್‌ನೊಂದಿಗೆ ಪರಿಶೀಲಿಸಲಾಗಿದೆ.

8. ಭೌತಿಕ ನಗದು ಪರಿಶೀಲನೆ ಕುರಿತು :

2016–17 ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ದಿನಾಂಕ : 15.09.2018 ರಂದು ಖಾಯಂ ಮುಂಗಡ ಹಣದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಿದಾಗ ಒಟ್ಟು ರೂ. 1215/– ನಗದು ಶಿಲ್ಕು ಬಾಕಿ ಉಳಿದಿದ್ದು ಭೌತಿಕವಾಗಿ ತಾಳೆ ಹೊಂದಿರುತ್ತದೆ ವಿವರಗಳುಕೆಳಕಂಡಂತಿದೆ.

ಕ್ರ.ಸಂ	ವಿವರ	ರೂ.
1	500 x 2	1000
2	100 x 2	200
3	10 x 1	10
4	5 x 1	5
	ಒಟ್ಟು	**1215**

9. ರಶೀದಿ ಪುಸ್ತಕಗಳನ್ನು ಪೂರ್ಣವಾಗಿ ಬಳಕೆ ಮಾಡದಿರುವುದು ಹಾಗೂ ಖಾಲಿ ಉಳಿಸಿಕೊಂಡಿರುವ ವಿವರಗಳು :

ಸಂಗೀತ ವಿಶ್ವವಿದ್ಯಾನಿಲಯ, ಮೈಸೂರು ರಶೀದಿ ದಾಸ್ತಾನು ಪುಸ್ತಕದಂತೆ ಬಳಕೆಯಾಗಿರುವ ಹಾಗೂ ಬಳಕೆಯಾಗದೆ ಉಳಿದಿರುವ ರಶೀದಿ ಪುಸ್ತಕಗಳನ್ನು ಪರಿಶೀಲಿಸಿದ ವಿವರವನ್ನು ನೀಡಲಾಗಿದೆ. ರಶೀದಿ ಪುಸ್ತಕಗಳ ಬಳಕೆಗೆ ಕುರಿತಂತೆ ಒಂದು ರಶೀದಿ ಪುಸ್ತಕವನ್ನು ಪೂರ್ಣವಾಗಿ ಬಳಸದೆ ಮತ್ತೊಂದು ರಶೀದಿ ಪುಸ್ತಕವನ್ನು ಬಳಕೆಗೆ ತೆಗೆದುಕೊಂಡಿರುವುದು ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 6 ರನ್ವಯ ಒಂದು ರಶೀದಿ ಪುಸ್ತಕವನ್ನು ಪೂರ್ಣವಾಗಿ ಬಳಸಿದ ನಂತರವೇ ಮತ್ತೊಂದು ರಶೀದಿ ಪುಸ್ತಕವನ್ನು ಬಳಕೆಗೆ ತೆಗೆದುಕೊಳ್ಳಬೇಕಾಗಿರುತ್ತದೆ. ರಶೀದಿ ಪುಸ್ತಕಗಳ ಬಳಕೆಯಲ್ಲಿ ನಿಯಮಾನುಸಾರ ನಿರ್ವಹಿಸಲು ಸೂಚಿಸಲಾಗಿದೆ.

ಕ್ರ.ಸಂ	ರಶೀದಿ ಪುಸ್ತಕ ಸಂಖ್ಯೆ	ರಶೀದಿ ಕ್ರಮ ಸಂಖ್ಯೆ		ಷರಾ
		ಇಂದ	ವರೆಗೆ	
1	44	2151 (ದಿ : 19.02.2015)	2174 (ದಿ: 05.05.2015)	ಭಾಗಶಃ ಉಪಯೋಗಿಸಲಾಗಿದೆ.
2	23	1136 (ದಿ : 22.06.2016)	1140 (ದಿ :29.07.2016)	ಭಾಗಶಃ ಉಪಯೋಗಿಸಲಾಗಿದೆ.
3	45	2201 (ದಿ:06.10.2017)	2218 (ದಿ : 14.02.2018)	ಭಾಗಶಃ ಉಪಯೋಗಿಸಲಾಗಿದೆ.

9 (ಎ) : ಉಪಯೋಗಿಸದೆ ಉಳಿದಿರುವ ರಶೀದಿ ಪುಸ್ತಕಗಳ ವಿವರ :

ದಿನಾಂಕ : 25.09.2018 ರಂದು ರಶೀದಿ ಪುಸ್ತಕಗಳ ದಾಸ್ತಾನು ಲೆಕ್ಕ ಪರಿಶೀಲಿಸಲಾಗಿದ್ದು, ರಶೀದಿ ಪುಸ್ತಕ ಸಂಖ್ಯೆ 46 ರಿಂದ ರಶೀದಿ ಪುಸ್ತಕ ಸಂಖ್ಯೆ 70 ರವರೆಗೆ (ಕ್ರಮ ಸಂಖ್ಯೆ : 2251 ರಿಂದ 3500 ರವರೆಗೆ) ಒಟ್ಟು 25 ರಶೀದಿ ಪುಸ್ತಕಗಳು ಉಪಯೋಗಿಸದೆ ಖಾಲಿ ಉಳಿದಿದ್ದು, ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ.

ಕ್ರ.ಸಂ	ರಶೀದಿ ಪುಸ್ತಕಗಳ ಸಂಖ್ಯೆ	ರಶೀದಿ ಕ್ರಮ ಸಂಖ್ಯೆ		ಷರಾ
		ಇಂದ	ವರೆಗೆ	
1	46	2251	2300	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
2	47	2301	2350	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
3	48	2351	2400	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
4	49	2401	2450	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
5	50	2451	2500	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
6	51	2501	2550	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
7	52	2551	2600	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
8	53	2601	2650	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
9	54	2651	2700	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
10	55	2701	2750	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
11	56	2751	2800	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
12	57	2801	2850	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
13	58	2851	2900	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
14	59	2901	2950	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
15	60	2951	3000	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
16	61	3001	3050	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
17	62	3051	3100	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
18	63	3101	3150	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
19	64	3151	3200	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
20	65	3201	3250	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
21	66	3251	3300	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
22	67	3301	3350	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
23	68	3351	3400	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
24	69	3401	3450	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ
25	70	3451	3500	2016–17 ನೇ ಸಾಲಿಗೆ ಖಾಲಿ ಉಳಿದಿರುತ್ತದೆ

10. ಅಳತೆ ಪುಸ್ತಕಗಳ ದಾಸ್ತಾನು ಪರಿಶೀಲನೆ :

ದಿನಾಂಕ : 11.09.2018 ರಂದು ಕಛೇರಿಯ ಅಳತೆ ಪುಸ್ತಕಗಳ (MB) ದಾಸ್ತಾನು ವಹಿ ಪರಿಶೀಲಿಸಿದಾಗ ರಶೀದಿ ಪುಸ್ತಕ ಸಂಖ್ಯೆ 1897, 1898 ಮತ್ತು 1899 ಈ 3 ಅಳತೆ ಪುಸ್ತಕಗಳನ್ನು ಉಪಯೋಗಿಸುತ್ತಿದ್ದು, ಸಂಪೂರ್ಣವಾಗಿ ಖಾಲಿ ಉಳಿದಿರುವ ಅಳತೆ ಪುಸ್ತಕಗಳು (MB) ಭೌತಿಕವಾಗಿ ಯಾವುದೂ ಇರುವುದಿಲ್ಲ.

11. ಅಂಕಪಟ್ಟಿಗಳ ದಾಸ್ತಾನು ಪರಿಶೀಲನೆ :

ದಿನಾಂಕ : 27.09.2018 ರಂದು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ ಅಂಕಪಟ್ಟಿಗಳ ದಾಸ್ತಾನು ವಹಿಯನ್ನು ಪರಿಶೀಲಿಸಿದಾಗ ದಾಸ್ತಾನು ವಹಿಯ ಪುಟ ಸಂಖ್ಯೆ 20 ರಿಂದ 23 ರವರೆಗಿನ ದಾಖಲೆ ಪ್ರಕಾರ ಅಂಕಪಟ್ಟಿಗಳ ದಾಸ್ತಾನುವಿನ ವಿವರ ಕೆಳಕಂಡಂತಿದೆ.

Corrected Copies	181
ಖಾಲಿ ಅಂಕಪಟ್ಟಿಗಳು	192
	373
Miss print	-1
	374
ವಿದ್ಯಾರ್ಥಿಗಳಿಗೆ ವಿತರಿಸದೆ ಬಾಕಿ ಉಳಿದಿರುವ ಅಂಕಪಟ್ಟಿಗಳು	131
Total printed copies	505

ಒಟ್ಟು 505 ಅಂಕಪಟ್ಟಿಗಳು ದಾಸ್ತಾನುವಿನ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

ಅಂಕಪಟ್ಟಿಗಳು ಮುದ್ರಣವಾಗಿರುವ ಪ್ರತಿಗಳಲ್ಲಿ 181 ಸಂಖ್ಯೆ ಅಂಕಪಟ್ಟಿಗಳು ಲೋಪದೋಷಗಳು ಕಂಡುಬಂದಿದ್ದು, ದಾಸ್ತಾನುವಿನಲ್ಲಿ ಹಾಗೆಯೇ ಉಳಿದಿರುತ್ತದೆ. ಇದರಿಂದ ಅಂಕಪಟ್ಟಿ ಪ್ರಕರಣದಲ್ಲಿ ಯಾವುದೇ ರೀತಿ ಗಂಭೀರ ಆರೋಪ ಕಂಡುಬಂದಲ್ಲಿ ಆಡಳಿತಾತ್ಮಕವಾಗಿ ಕುಲಸಚಿವರು ಕ್ರಮಕೈಗೊಳ್ಳುವಂತೆ ಸೂಚಿಸಿದೆ. ಲೋಪದೋಷಗಳು ಮುದ್ರಿತವಾಗಿರುವ ಪ್ರತಿಗಳನ್ನು ರದ್ದುಪಡಿಸಲು ಸೂಚಿಸಿದೆ.

12. ಸೇವಾ ಅಂಚೆ ಚೀಟಿ ದಾಸ್ತಾನು ವಹಿ ಪರಿಶೀಲನೆ :

2016–17 ನೇ ಸಾಲಿನ ಲೆಕ್ಕ ಪರಿಶೋಧನಾ ಪ್ರಾರಂಭಿಕ ದಿನಾಂಕ : 11.09.2018 ರಂದು ಅಂಚೆ ಸೇವಾ ಚೀಟಿಗಳ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿ ಯಾವುದೇ ಸೇವಾ ಚೀಟಿ ಬಾಕಿ ಇರುವುದಿಲ್ಲ. ಇದು ದಾಸ್ತಾನು ವಹಿಯ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

13 ಸರ್ಟಿಫಿಕೇಟ್ ಕೋರ್ಸ್ ಪ್ರವೇಶಾತಿ ವಿವರ :

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ 2016–17 ನೇ ಸಾಲಿಗೆ ಸಂಗೀತ, ತಬಲ, ಯೋಗ ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ 6 ತಿಂಗಳ ಸರ್ಟಿಫಿಕೇಟ್ ಕೋರ್ಸ್‌ನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ವರ್ಷದಲ್ಲಿ 6ನೇ ತಂಡಕ್ಕೆ ಪ್ರವೇಶಾತಿಗೆ ಅವಕಾಶ ನೀಡಿದ್ದು, ಮೈಸೂರು ಅಧ್ಯಯನ ಕೇಂದ್ರ ಮತ್ತು ಮಂಡ್ಯ ಅಧ್ಯಯನ ಕೇಂದ್ರದೊಂದಿಗೆ ಹುಣಸೂರು ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಿದ್ದು, ಒಟ್ಟು 166 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ವಿವರಗಳು ಕೆಳಕಂಡಂತಿದೆ.

ಕ್ರ.ಸಂ	ಕೋರ್ಸ್‌ಗಳ ವಿವರ	ಅಧ್ಯಯನ ಕೇಂದ್ರಗಳು			ಒಟ್ಟು
		ಮೈಸೂರು	ಮಂಡ್ಯ	ಹುಣಸೂರು	
1	ಸುಗಮ ಸಂಗೀತ	34	29	6	62
2	ಭಕ್ತಿ ಸಂಗೀತ	09	–	–	09
3	ಹಾರ್ಮೋನಿಯಂ	25	–	15	40
4	ತಬಲ	14	–	–	14
5	ವಯೋಲಿನ್	18	–	–	18
6	ಯೋಗ	23	–	–	23
	ಒಟ್ಟು	123	29	21	173

2016–17 ನೇ ಸಾಲಿನ ಸರ್ಟಿಫಿಕೇಟ್ ಕೋರ್ಸಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ವಸೂಲಿಸಿದ ಶುಲ್ಕದ ವಿವರ ಕೆಳಕಂಡಂತಿದೆ.

ಕ್ರ.ಸಂ	ಕೋರ್ಸ್‌ಗಳ ವಿವರ	ವರ್ಗ	ವಿದ್ಯಾರ್ಥಿಗಳ ಸಂಖ್ಯೆ	ಪ್ರವೇಶಾತಿ ಶುಲ್ಕ	ಬೇಡಿಕೆ	ವಸೂಲಾತಿ
1	ಸುಗಮ ಸಂಗೀತ	SC	25	1440	36000	36000
		ST	1	1440	1440	1440
		others	43	1800	77400	77400
2	ಭಕ್ತಿ ಸಂಗೀತ	SC	1	1440	1400	1400
		ST	-	1440	-	-
		others	9	1800	16200	16200
3	ಹಾರ್ಮೋನಿಯಂ	SC	18	1440	25920	25920
		ST	5	1440	7200	7200
		others	16	1800	28800	28800
4	ತಬಲಾ	SC	7	1440	10080	10080
		ST	-	1440	-	-
		others	6	1800	10800	10800
5	ಪಿಟೀಲು	SC	6	1440	8640	8640
		ST	3	1440	4320	4320
		others	11	1800	19800	19800
6	ಯೋಗ	SC	3	1440	4320	4320
		ST	-	1440	-	-
			19	1800	34200	34200
		Total	**173**		**286560**	**286560**

14. 2016–17ನೇ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗಗಳು ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿವರ :

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಮೈಸೂರು ಶೈಕ್ಷಣಿಕ ವರ್ಷದಲ್ಲಿ ವಿವಿಧ ಚತುರ್ಮಾಸಗಳ ಸಂಬಂಧಿತ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳು ಹಾಗೂ ಡಿಪ್ಲೊಮಾ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಪಡೆದಿರುವ ವಿವರಗಳನ್ನು ಪ್ರವೇಶಾತಿ ವಹಿ, ವಿದ್ಯಾರ್ಥಿಗಳ ವೈಯಕ್ತಿಕ ಕಡತ ಮತ್ತು ಚಲನ್ ಪ್ರತಿಗಳೊಂದಿಗೆ ಪರಿಶೀಲಿಸಲಾಯಿತು. ವಿವರಗಳು ಕೆಳಕಂಡಂತಿದೆ.

ಕ್ರ.ಸಂ	ಕೋರ್ಸ್	ಪ್ರವೇಶಾತಿ ಪಡೆದಿರುವ ಒಟ್ಟು ವಿದ್ಯಾರ್ಥಿಗಳು
1	ಡಿಪ್ಲೊಮಾ	30
2	ಬಿ.ಎ	20
3	ಎಂ.ಎ	29
	ಒಟ್ಟು	**79**

2016–17 ನೇ ಸಾಲಿನ ವಿವಿಧ ಶೈಕ್ಷಣಿಕ ವಿಭಾಗದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ವಸೂಲಿಸಿದ ಶುಲ್ಕದ ವಿವರ ಕೆಳಕಂಡಂತಿದೆ.

ಡಿಪ್ಲೊಮಾ						
ಕ್ರ.ಸಂ	ವರ್ಗ	ವಿದ್ಯಾರ್ಥಿಗಳ ಸಂಖ್ಯೆ	ಪ್ರವೇಶಾತಿ ಶುಲ್ಕ	ಬೇಡಿಕೆ	ವಸೂಲಾತಿ	ಬಾಕಿ
1	ಎಸ್.ಸಿ	15	1040	15600	15600	–
2	ಎಸ್.ಟಿ	1	1040	1040	1040	–
3	ಇತರೆ	14	3050	42700	42700	–
	ಒಟ್ಟು	**30**		**59340**	**59340**	–

ಬಿ.ಎ						
ಕ್ರ.ಸಂ	ವರ್ಗ	ವಿದ್ಯಾರ್ಥಿಗಳ ಸಂಖ್ಯೆ	ಪ್ರವೇಶಾತಿ ಶುಲ್ಕ	ಬೇಡಿಕೆ	ವಸೂಲಾತಿ	ಬಾಕಿ
1	ಎಸ್.ಸಿ	6	730	4380	4380	–
2	ಎಸ್.ಟಿ	–	–	–	–	–
3	ಇತರೆ	14	2050	28700	28700	–
	ಒಟ್ಟು	**20**		**33080**	**33080**	

ಎಂ.ಎ						
ಕ್ರ.ಸಂ	ವರ್ಗ	ವಿದ್ಯಾರ್ಥಿಗಳ ಸಂಖ್ಯೆ	ಪ್ರವೇಶಾತಿ ಶುಲ್ಕ	ಬೇಡಿಕೆ	ವಸೂಲಾತಿ	ಬಾಕಿ
1	ಎಸ್.ಸಿ	4	830	3320	3320	–
2	ಎಸ್.ಟಿ	2	830	1660	1660	–
3	ಇತರೆ	21	2500	52500	52500	–
	ಒಟ್ಟು	**29**		**57480**	**57480**	

ಘೋಷ್ವಾರೆ

ಕೋರ್ಸ್‌ಗಳ ವಿವರ	ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ಪ್ರವೇಶಾತಿ ಶುಲ್ಕ ವಸೂಲಾತಿ
ಡಿಪ್ಲೊಮಾ/ಬಿ.ಎ/ಎಂ.ಎ	79	149900
ಸರ್ಟಿಫಿಕೇಟ್ ಕೋರ್ಸ್	173	286560
ಒಟ್ಟು	**252**	**436460**

15. ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಯಾಗದಿರುವುದು :

2016–17 ನೇ ಸಾಲಿಗೆ ವಿಶ್ವವಿದ್ಯಾಲಯ ವಿವಿಧ ಶೈಕ್ಷಣಿಕ ಕೋರ್ಸುಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿವೇತನ ಮಂಜೂರಾಗಿದ್ದು, ಇನ್ನು ಮರುಭರಿಕೆಯಾಗಿರುತ್ತದೆ, ರೂ. 34680 + 13200 + 10320 = 58200/– ಗಳನ್ನು ವ ಮರುಭರಿಕೆಯಾಗಬೇಕಾಗಿರುತ್ತದೆ. ಕೂಡಲೇ ಮರುಭರಿಕೆಗೆ ಕ್ರಮಕೈಗೊಳ್ಳಲು ಸೂಚಿಸಿದೆ. ಡಿ.ಸಿ.ಬಿ ಕೆಳಗಿನಂತಿದೆ. ವಿವರಗಳನ್ನು ಒದಗಿಸುವವರೆಗೆ ಮರುಭರಿಕೆ ಮೊತ್ತ ರೂ. 58200/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ವಿಷಯ	ಬೇಡಿಕೆ	ವಸೂಲಾತಿ	ಬಾಕಿ
diploma 1st & 2nd BA I sem BA 3rd Sem BA 5th Sem	196950	161570	34680
BA 2nd, 4th, 6th Sem	75850	62650	13200
MA I & II	10320	-	10320
ಒಟ್ಟು	**283120**	**229380**	**58200**

ವಿವರಗಳನ್ನು ಅನುಬಂಧ – 4 ರಲ್ಲಿ ನೀಡಿದೆ.

ಅನುಪಾಲನಾ ವರದಿ

2016–17ನೇ ಸಾಲಿನ ವಿಶ್ವವಿದ್ಯಾಲಯ ವಿವಿದ ಶೈಕ್ಷಣಿಕ ಕೋರ್ಸಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ವೇತನ ಮಂಜೂರಾಗಿದೆ ವಿವರ ಈ ಕೆಳಕಂಡಂತೆ ಇರುತ್ತದೆ.

1) 2016–17 ನೇ ಸಾಲಿನ ಪ್ರಥಮ ಹಾಗೂ ದ್ವಿತೀಯ ವರ್ಷಗಳಿಗೆ ದಾಖಲಾದ ವಿದ್ಯಾರ್ಥಿಗಳು ಹಾಗೂ ಪಾವತಿ ವಿವರ (ಡಿಪ್ಲೊಮಾ)	1) ಸಮಾಜ ಕಲ್ಯಾಣ ಇಲಾಖೆಯಿಂದ ಹಣಬಂದಿರುವುದಿಲ್ಲ. ಕಾರಣ ಈ ವಿದ್ಯಾರ್ಥಿಗಳು ಪ್ರವೇಶಾತಿಯಿಂದ ಬಿಟ್ಟು ಹೋಗಿರುತ್ತಾರೆ. 2)ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆಯಾದ ಹಣದ ವಿವರ	6 ಜನ x 1320=7920.00 11 ಜನ x 2010=7920.00 30030.00 2 ಜನ x 1320=2640.00 1 ಜನ x 2010= 2010.00 4650.00 **ಒಟ್ಟು = 34680.00**
2) 2016–17 ನೇ ಸಾಲಿನ 1,2,3,4ನೇ ಚತುರ್ಮಾಸ ವಿವಿದ ವಿಭಾಗಗಳ ಶುಲ್ಕ ಪಾವತಿಯ ವಿವರ (ಎಂ.ಎ)	1) ಸಮಾಜ ಕಲ್ಯಾಣ ಇಲಾಖೆಯಿಂದ ಹಣ ಬಂದಿರುವುದಿಲ್ಲ ಕಾರಣ ವಿದ್ಯಾರ್ಥಿಗಳು ಪ್ರವೇಶಾತಿಯಿಂದ ಬಿಟ್ಟು ಹೋಗಿರುತ್ತಾರೆ. 2) ಸಮಾಜ ಕಲ್ಯಾಣ ಇಲಾಖೆಯಿಂದ ಮರುಪಾವತಿ ಹಣದ ವಿವರ.	3 ಜನ x 1720= 5160.00 3 ಜನ x 1720= 5160.00 10320.00
3) 2016–17ನೇ ಸಾಲಿನ ಬಿ.ಎ 2,4,6ನೇ ಚತುರ್ಮಾಸದ ಬಾಕಿ ಇರುವ ಶುಲ್ಕದ ವಿವರ.	1) ಸಮಾಜ ಕಲ್ಯಾಣ ಇಲಾಖೆಯಿಂದ ಹಣ ಬಂದಿರುವುದಿಲ್ಲ ಕಾರಣ ವಿದ್ಯಾರ್ಥಿಗಳ ಪ್ರವೇಶಾತಿಯಿಂದ ಬಿಟ್ಟು ಹೋಗಿರುತ್ತಾರೆ 2) ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆಯಾದ ಹಣದ ವಿವರ.	3 ಜನ x 1320=3960.00 7 ಜನ x 1320=9240.00 13200.00 Grand total : 58200.00

16. ಕುಲಪತಿಗಳು, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅವರಿಗೆ ನಿಗಧಿಪಡಿಸಿದ ಮನೆ ಬಾಡಿಗೆ ಭತ್ಯೆಕ್ಕಿಂತ ರೂ. 1,30,000/– ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದನ್ನು ವಸೂಲಿ ಮಾಡಿರುವುದು : ಮಾನ್ಯ ಕುಲಾಧಿಪತಿಯವರು ರಾಜಭವನ, ಬೆಂಗಳೂರು ರವರು ತಮ್ಮ ಕಛೇರಿ ವಿಜ್ಞಾಪನಾ ಪತ್ರ ಸಂಖ್ಯೆ : GS/01/KMM/2013 ದಿನಾಂಕ : 10.07.2014 ರಲ್ಲಿ ಮತ್ತು ಸರ್ಕಾರದ ಆದೇಶ ಸಂಖ್ಯೆ : ಇಡಿ/472/ಯುಎನ್ಇ/2014 ದಿನಾಂಕ : 23.07.2014 ರಲ್ಲಿ ಕುಲಪತಿಗಳಾದ ಡಾ. ಸರ್ವಮಂಗಳಾ ಶಂಕರ್ ರವರಿಗೆ ಬಾಡಿಗೆ ರಹಿತ ವಸತಿಗೃಹ ಒದಗಿಸುವಂತೆ ಪದನಾಮ (Designated) ವಸತಿಗೃಹ ಲಭ್ಯವಿಲ್ಲದಿದ್ದಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಅಂಗೀಕಾರಾರ್ಹವಾದ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸುವಂತೆ ಆದೇಶಿಸಲಾಗಿರುತ್ತದೆ. ಈ ಆದೇಶದನ್ವಯ ಕುಲಪತಿಯವರ ಮೂಲವೇತನ ರೂ. 75000/– ಗಳಿಗೆ ಮೈಸೂರು ನಗರದ ಬಾಡಿಗೆ ಭತ್ಯೆ ದರವಾದ ಶೇ 20 ರಂತೆ ಮಾಹೆಯಾನ ರೂ. 15000/– ಗಳ ಮನೆಬಾಡಿಗೆ ಭತ್ಯೆ ಪಾವತಿಸಬೇಕಾಗಿರುತ್ತದೆ. ಆದೇಶ ಉಲ್ಲಂಘಿಸಿ ಬಾಡಿಗೆ ಕರಾರಿನ ಮೂಲಕ ಖಾಸಗಿ ವಸತಿ ಗೃಹವನ್ನು ಬಾಡಿಗೆ ಪಡೆದು 2016–17 ನೇ ಸಾಲಿನ ಅವಧಿ 4/2016 ರಿಂದ 3/2017 ರ ಮಾಹೆಯವರೆಗೆ ಮಾಹೆಯಾನ ರೂ. 25000/– ಗಳ ಮನೆಬಾಡಿಗೆಯನ್ನು ಪಾವತಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ : ಇಡಿ/293/ಯುಎನ್ಇ/2015 ದಿನಾಂಕ : 06.08.2015 ರಲ್ಲಿ ವಿಶ್ವವಿದ್ಯಾಲಯವು ಕುಲಪತಿಗಾಗಿ ಮನೆಬಾಡಿಗೆ ಭತ್ಯೆ ನೀಡುವ ಬದಲು ವಸತಿಗಾಗಿ ಬಾಡಿಗೆ ಮನೆಯನ್ನು ತೆಗೆದುಕೊಳ್ಳುವ ಬಗ್ಗೆ ನಿರ್ಧರಿಸಿದ್ದು, ಸಿಂಡಿಕೇಟ್ ಸಭೆಯ ಮುಂದೆ ಇಟ್ಟು ತೀರ್ಮಾನ ತೆಗೆದುಕೊಳ್ಳುವಂತೆ ನಿರ್ದೇಶಿಸಲಾಗಿದೆ. ಸರ್ಕಾರದ ಪೂರ್ವಾನುಮತಿ ಪಡೆಯದೆ ಮಾಹೆಯಾನ ಬಾಡಿಗೆ ದರದ ಬಗ್ಗೆ ಪ್ರಸ್ತಾಪಿಸದಿಲ್ಲದಿದ್ದರೂ ಬಾಡಿಗೆ ಕರಾರಿನ ಮೂಲಕ ಖಾಸಗಿ ವಸತಿ ಗೃಹವನ್ನು ಬಾಡಿಗೆ ಪಡೆದು ಮಾಹೆಯಾನ ರೂ. 25000/– ಗಳ ಮನೆ ಬಾಡಿಗೆ ಪಾವತಿಸಿರುವುದು ಆಕ್ಷೇಪಾರ್ಹವಾಗಿದೆ. ಮಾನ್ಯ ಕುಲಾಧಿಪತಿಯವರು ಆದೇಶಿಸಿರುವಂತೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಅಂಗೀಕಾರಾರ್ಹವಾದ ಮನೆಬಾಡಿಗೆ ಭತ್ಯೆ ರೂ. 15000/– ಗಳನ್ನು ಮಾತ್ರ ಮನೆ ಬಾಡಿಗೆಯಾಗಿ ಪಾವತಿಸಬೇಕಾಗಿರುತ್ತದೆ. 2016–17ನೇ ಸಾಲಿನಲ್ಲಿ ಕುಲಪತಿಗಳಿಗೆ 2/2016 ರಿಂದ 2/2017 ರ ಮಾಹೆಯವರೆಗೆ ಒಟ್ಟು 13 ತಿಂಗಳುಗಳಿಗೆ ಒಟ್ಟು ರೂ. 3,25,000/– ಗಳ ಮನೆಬಾಡಿಗೆ ಪಾವತಿಸಿದೆ ಕುಲಾಧಿಪತಿಯವರ ಆದೇಶದಂತೆ ವಾಸ್ತವವಾಗಿ ಒಟ್ಟು ರೂ. 195000/– ಗಳನ್ನು ಪಾವತಿಸಬೇಕಾಗಿದ್ದು, ಹೆಚ್ಚುವರಿ ಪಾವತಿಸಿರುವ ರೂ. 1,30,000/– ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ. (ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ : 18/05.10.2018)	**ಅನುಪಾಲನಾ ವರದಿ** ಘನತೆವೆತ್ತ ರಾಜ್ಯಪಾಲರ ಪತ್ರ ಸಂಖ್ಯೆ : GS 01 KMM 2013, ದಿನಾಂಕ : 10.07.2014 ರಲ್ಲಿ ಕುಲಪತಿಯವರಿಗೆ ಬಾಡಿಗೆ ರಹಿತ ವಸತಿಗೃಹ ಒದಗಿಸುವಂತೆ, ಸೂಚಿಸಿದ್ದು, ವಸತಿಗೃಹ ಲಭ್ಯವಿಲ್ಲದಿದ್ದಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಅರ್ಹ ಮನೆ ಬಾಡಿಗೆಭತ್ಯೆ ನೀಡುವಂತೆ ಸೂಚಿಸಿರುವುದಾಗಿ ತಿಳಿಸಿರುವುದು ಸರಿಯಷ್ಟೇ. ಆದರೆ, ಹಿಂದಿನ ಎಲ್ಲಾ ಕುಲಪತಿಗಳಿಗೆ ಪ್ರಶಾಸನ ಸಭೆಯ ಅನುಮೋದನೆ ಪಡೆದು 25,000/– ಪಡೆಯಲಾಗುತ್ತಿತ್ತು. ಅದರಂತೆ ಸರ್ಕಾರಕ್ಕೆ ಮನವಿ ಮಾಡಲಾಗಿ, ಸರ್ಕಾರದ ಪತ್ರ ಸಂಖ್ಯೆ : ಇಡಿ 293 ಯುಎನಿ 2015 ದಿನಾಂಕ :06.08.2015 ರಲ್ಲಿ ವಿಶ್ವವಿದ್ಯಾಲಯದ ಕುಲಪತಿಗಾಗಿ ಬಾಡಿಗೆಭತ್ಯೆ ನೀಡುವ ಬದಲು ವಸತಿಗಾಗಿ ಮನೆ ಬಾಡಿಗೆ ತೆಗೆದುಕೊಳ್ಳುವ ಬಗ್ಗೆ ನಿರ್ಧರಿಸಿದ್ದು, ಸಿಂಡಿಕೇಟ್ ಸಭೆಯ ಮುಂದಿಟ್ಟು ತೀರ್ಮಾನ ತೆಗೆದುಕೊಳ್ಳುವಂತೆ ಆದೇಶವಾಗಿದ್ದು, ಅದರಂತೆ 15ನೇ ಪ್ರಶಾಸನ ಸಭೆಗೆ ಮಂಡಿಸಿ, ಸಭೆ ನಡಾವಳಿ ಕಂಡಿಕೆ 2016/15.31ರಲ್ಲಿ ಬಾಡಿಗೆ ಪಾವತಿ 25,000/– ರೂ. ಗೆ ಅನುಮೋದನೆ ಪಡೆಯಲಾಗಿದೆ. ಮುಂದುವರೆದು ಕಾರ್ಯಪಾಲಕ ಇಂಜಿನಿಯರ್ ರವರು ಸದರಿ ಮನೆ ಬಾಡಿಗೆಯನ್ನು 25,000/– ರೂ. ಗಳಿಗೆ ನಿಗದಿಪಡಿಸಿ ಆದೇಶ ನೀಡಿರುತ್ತಾರೆ. ಪತ್ರದ ಪ್ರತಿ ಲಗತ್ತಿಸಿದೆ. ಜೊತೆಯಲ್ಲಿ ಸರ್ಕಾರದ ಪತ್ರ, ಸಿಂಡಿಕೇಟ್ ನಡಾವಳಿಯನ್ನು ಮಾಹಿತಿಗೆ ಲಗತ್ತಿಸಿದೆ. ಎಲ್ಲಾ ಮಾಹಿತಿ ಹಾಗೂ ದಾಖಲೆ ಪರಿಶೀಲಿಸಿ ವರದಿಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ 1,30,000/– ತೀರುವಳಿಮಾಡುವಂತೆ ಕೋರಿದೆ.

ಕ್ರ.ಸಂ	ಮಾಹೆ	ಓಚರ್ ಸಂಖ್ಯೆ	ಚೆಕ್‌ಸಂಖ್ಯೆ ದಿನಾಂಕ	ಬಿಲ್ಲಿನ ಮೊತ್ತ	ಟಿ.ಡಿ.ಎಸ್ 10%	ಚೆಕ್‌ಮೊತ್ತ	ಹೆಚ್ಚುವರಿ ಪಾವತಿಸಿರುವುದು
1.	ಫೆಬ್ರವರಿ 16	145	798690/ 28.05.16	75000	7500	67500	30000
2.	ಮಾರ್ಚ್ 16						
3.	ಏಪ್ರಿಲ್ 16						
4.	ಮೇ 16	223	798769/ 11.7.16	25000	2500	22500	10000
5.	ಜೂನ್ 16	422	136336/	75000	7500	67500	30000
6.	ಜುಲೈ 16		01.01.16				
7.	ಆಗಸ್ಟ್ 16						
8.	ಸೆಪ್ಟೆಂಬರ್ 16	503	136407/ 26.10.16	25000	2500	22500	10000
9.	ಅಕ್ಟೋಬರ್ 16	642	136548/ 26.12.16	50000	5000	45000	20000
10.	ನವೆಂಬರ್ 16						
11.	ಡಿಸೆಂಬರ್ 16	709	136616/ 24.1.17	25000	2500	22500	10000
12.	ಜನವರಿ 17	831	672123/ 20.3.17	50000	5000	45000	20000
13.	ಫೆಬ್ರವರಿ 17						
ಒಟ್ಟು				**325000**	**32500**	**292500**	**130000**

ಮೂಲವೇತನ – 75000
20% ಮನೆಬಾಡಿಗೆ ಭತ್ಯೆ – 15000
90000

17. ಸಂಗೀತ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳ ವಿವರ :

ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರಿ ಆದೇಶ ಸಂಖ್ಯೆ : ಇಡಿ/24/ಯುಆರ್‌ಸಿ 2010 ದಿನಾಂಕ : 08.08.2012 ರಲ್ಲಿ ಕೆಳಕಂಡ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸಿ ಮಂಜೂರು ಮಾಡಲಾಗಿದೆ.

(1) ಬೋಧಕ ಸಿಬ್ಬಂದಿ 15
(2) ಬೋಧಕೇತರ ಸಿಬ್ಬಂದಿ 19
ಒಟ್ಟು 34

(1) ಬೋಧಕ ಸಿಬ್ಬಂದಿ

ಕ್ರ ಸಂ	ವಿಭಾಗ	ಪ್ರಾಧ್ಯಾಪಕ	ಪ್ರವಾಚಕ	ಅಧ್ಯಾಪಕ	ಒಟ್ಟು
1.	ಹಿಂದುಸ್ಥಾನಿ ಸಂಗೀತ	1	2	3	6
2.	ಸಂಗೀತ ಶಾಸ್ತ್ರ	1	2	2	5
3.	ಸಂಗೀತ ಸಂಶೋಧನಾ	1	1	2	4
	ಒಟ್ಟು	**3**	**5**	**7**	**15**

(2) ಬೋಧಕೇತರ ಸಿಬ್ಬಂದಿ

ಕ್ರ.ಸಂ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1.	ಕುಲಸಚಿವರು	1
2.	ಸಹಾಯಕ ಕುಲಸಚಿವರು	1
3.	ಹಣಕಾಸು ಅಧಿಕಾರಿ	1
4.	ಲೆಕ್ಕ ಸಹಾಯಕರು	2
5.	ಅಧೀಕ್ಷಕರು	1
6.	ಹಿರಿಯ ಸಹಾಯಕರು	1
7.	ಕಿರಿಯ ಸಹಾಯಕರು	3
8.	ಡಿ.ಟಿ.ಪಿ ಆಪರೇಟರ್	4
9.	ವಾಹನ ಚಾಲಕರು	1
10	ಡಿ ದರ್ಜೆ ಸಹಾಯಕರು	4
	ಒಟ್ಟು	**19**

(3) ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು

ಕ್ರ.ಸಂ	ವಿವರ	ಹುದ್ದೆಗಳ ಸಂಖ್ಯೆ
1	ತಾತ್ಕಾಲಿಕ ಬೋಧಕ ಸಿಬ್ಬಂದಿ	27
2	ತಾತ್ಕಾಲಿಕ ಸಾಥಿದಾರರು	11
3	ಕ್ರೋಢೀಕೃತ ನೌಕರರು	24
	ಒಟ್ಟು	**62**

18. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಗೂ ತಾತ್ಕಾಲಿಕ ಸಾಥಿದಾರರುಗಳನ್ನು ನೇಮಕಾತಿ ಮಾಡಿಕೊಂಡು ವೇತನ ಪಾವತಿಸಿರುವ ವಿವರ.

2016–17ನೇ ಸಾಲಿನ ಹಣಕಾಸು ವರ್ಷದಲ್ಲಿ ವೇತನ ಬಟವಾಡೆ ವಿವರಗಳನ್ನು ಪರಿಶೀಲಿಸಿದಾಗ ತಾತ್ಕಾಲಿಕವಾಗಿ ನೇಮಕಗೊಂಡ

ತಾತ್ಕಾಲಿಕ ಬೋಧಕ ಸಿಬ್ಬಂದಿಗಳು	– 27
ಬೋಧಕೇತರ ಸಿಬ್ಬಂದಿಗಳು	– 24
ಸಾಥಿದಾರರು	– 11
ಒಟ್ಟು	– 62

ಒಟ್ಟು 62 ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಲಾಗಿದೆ. ವಿವರವನ್ನು ಅನುಬಂಧ – 5 ರಲ್ಲಿ ನೀಡಿದೆ.

ಬೋಧಕ ಸಿಬ್ಬಂದಿ / ಬೋಧಕೇತರ ಸಿಬ್ಬಂದಿ ಹಾಗೂ ತಾತ್ಕಾಲಿಕ ಬೋಧಕ ಸಾಥಿದಾರರು ವೇತನ ಪಾವತಿಯನ್ನು ಆಯವ್ಯಯದಲ್ಲಿ ನಿಗದಿಪಡಿಸಿರುವ 8 ಹುದ್ದೆಗಳಿಗಿಂತ ಹೆಚ್ಚಿನ ಹುದ್ದೆ ಬಟವಾಡೆ ವಹಿಯಲ್ಲಿ ಹೆಚ್ಚುವರಿಯಾಗಿ ತೆಗೆದುಕೊಂಡು ವೇತನ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. ಈ ಬಗ್ಗೆ ಲೆಕ್ಕ ತಪಾಸಣಾ ವಿಚಾರಣೆ ಸಂಖ್ಯೆ : 2/11.09.2018 ರಲ್ಲಿ ವಿವರಣೆ ನೀಡಲಾಗಿದ್ದು, ವಿಚಾರಣೆಗೆ ಸರ್ಕಾರದ ಉನ್ನತ ಶಿಕ್ಷಣ ಕಾರ್ಯದರ್ಶಿಗಳ ಮಂಜೂರಾತಿ ಆದೇಶದ ಪ್ರತಿ ಹಾಗೂ ತಾತ್ಕಾಲಿಕ ನೇಮಕಾತಿಗಳಿಗೆ ಸಂಬಂಧಿಸಿದಂತೆ ಬೋಧಕ / ಬೋಧಕೇತರ / ಸಾಥಿದಾರರು ಒಂದು ವರ್ಷದವರೆಗೆ ನೇಮಕ ಮಾಡಿಕೊಂಡಿರುವುದು ಮತ್ತು ನಂತರ ಬಿಡುಗಡೆ ಮಾಡಿ ಪುನರ್ ನೇಮಕಾತಿ ನೀಡಬೇಕಾಗಿರುತ್ತದೆ ಹಾಗೂ ತಾತ್ಕಾಲಿಕ ಸೇವೆಯ ಮೇಲೆ ನೇಮಕಾತಿ ಮಾಡಿಕೊಂಡ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸಿ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. ಈ ಬಗ್ಗೆ ಸೂಕ್ತ ಸರ್ಕಾರದ ಆದೇಶದ ಪ್ರತಿ ಹಾಗೂ ವೇತನ ನಿಗದಿಪಡಿಸಿರುವ ಮಂಜೂರಾತಿ ಹಾಜರುಪಡಿಸುವವರೆಗೆ ರೂ. 90,95,873/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ – 5 ರಲ್ಲಿ ನೀಡಿದೆ.

ಏಪ್ರಿಲ್ – 2016 ರಿಂದ ಮಾರ್ಚ್ 2017 ರವರೆಗೆ ವೇತನ ಪಾವತಿಸಿರುವ ವಿವರ

1	ಬೋಧಕ ಸಿಬ್ಬಂದಿಗಳು	41,76,212
2	ಬೋಧಕೇತರ ಸಿಬ್ಬಂದಿಗಳು	34,00,247
3	ಸಾಥಿದಾರರು	15,19,414
	ಒಟ್ಟು	**9095873**

ಅನುಪಾಲನ ವರದಿ

ಸರ್ಕಾರಿ ಆದೇಶ ಇಡಿ/ಯುಆರ್‌ಸಿ 2010 ಬೆಂಗಳೂರು ದಿನಾಂಕ 8.8.2017 ರಂತೆ ಬೋಧಕ ಸಿಬ್ಬಂದಿ 15, ಬೋಧಕೇತರ ಸಿಬ್ಬಂದಿ–19 ಮಂಜೂರಾಗಿರುತ್ತದೆ.

ಬೋಧಕ ಸಿಬ್ಬಂದಿಯ ಎದುರಾಗಿ 27 ಜನ ತಾತ್ಕಾಲಿಕ ಬೋಧಕ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ತಾತ್ಕಾಲಿಕ ಸಾಥಿದಾರರು 7 ಜನ ಕಾರ್ಯನಿರ್ವಹಿಸುತ್ತಿದ್ದಾರೆ. ಬೋಧಕ ಸಿಬ್ಬಂದಿ ಹಾಗೂ ಸಾಥಿದಾರರನ್ನು ಅವಶ್ಯಕತೆಗನುಗುಣವಾಗಿ ಹಾಗೂ ಯುಆರ್‌ಸಿ ಮಾರ್ಗಸೂಚಿ ಪ್ರಕಾರ ತಾತ್ಕಾಲಿಕ ಸಂದರ್ಶನ ಮಾಡಿ ಪರಿಣಿತ ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಂಡು ಪ್ರತಿ 6 ತಿಂಗಳಿಗೆ ಆದೇಶ ಹೂರಡಿಸಿ ಪಾವತಿಗೆ ಕ್ರಮವಹಿಸಲಾಗಿದೆ ನಂತರದಲ್ಲಿ ಪ್ರಶಾಸನ ಸಭೆ ಅನುಮೋದನೆ ಪಡೆಯಲಾಗಿದೆ.
ತಾತ್ಕಾಲಿಕವಾಗಿ 21 ಬೋಧಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಹುದ್ದೆಗಳನ್ನು ಪ್ರಥಮ ಕುಲಪತಿಗಳು ವಿಶ್ವವಿದ್ಯಾಲಯ ಅಧಿನಿಯಮ 2009ರ ಅಧ್ಯಾಯ 9 ರ ಕಂಡಿಕೆ 62ರಲ್ಲಿ ಪ್ರಥಮ ಕುಲಪತಿಗಳ ಅಧಿಕಾರದ ಕಂಡಿಕೆ 5 ರಂತೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಪ್ರತಿ 6 ತಿಂಗಳಿಗೊಮ್ಮೆ ಆದೇಶವನ್ನು ಪರಿಷ್ಕರಿಸಿ ಆದೇಶ ಹೂರಡಿಸಿ ನೇಮಕಾತಿ ಮಾಡಿಕೊಂಡು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಈಗ್ಗೆ ಸರ್ಕಾರದ ಆದೇಶ ಇಡಿ/348/ಯುಎನ್‌ಇ 2, 2017 ಬೆಂಗಳೂರು ದಿನಾಂಕ : 05.12.2017ರಲ್ಲಿ ಸದರಿ ಸಿಬ್ಬಂದಿಗಳಿಗೆ (21) ನವೆಂಬರ್ 2017 ರಿಂದ ಜಾರಿಗೆ ಬರುವಂತೆ ಕ್ರೂಢೀಕೃತ ವೇತನ ನೀಡಲು ಆದೇಶವಾಗಿರುತ್ತದೆ. ಅಂದರೆ ಮೂಲವೇತನಕ್ಕೆ ಸರಿಸಮನಾಗಿ ರೂ. 10 ಅನ್ನು ಕಡಿತಗೊಳಿಸಿ ಪಾವತಿಸಲು ಆದೇಶವಾಗಿರುತ್ತದೆ. ಈ ಹಿನ್ನಲೆಯಲ್ಲಿ ಪಾವತಿಗೆ ಕ್ರಮವಹಿಸಲಾಗಿದೆ. ಮೇಲೆ ತಿಳಿಸಿರುವ ಮಾಹಿತಿಯನ್ನು ಪರಿಗಣಿಸಿ. ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ. 90,95,873/– ಗಳನ್ನು ತೀರುವಳಿ ಮಾಡಿಕೊಡುವಂತೆ ಕೋರಿದೆ.

19. ವಿಭಾಗದ ಮುಖ್ಯಸ್ಥರುಗಳಿಗೂ ಗೃಹಪರಿಚಾರಿಕ ಭತ್ಯೆ ರೂ. 60000/– ಪಾವತಿಸಿರುವುದನ್ನು ವಸೂಲಿಸಿರುವುದು :

ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ), ಕುಲಸಚಿವರು (ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿಯವರಿಗೆ 2016–17ನೇ ಸಾಲಿನಲ್ಲಿ ಮಾಹೆಯಾನ ರೂ. 3000/– ರಂತೆ ಗೃಹಪರಿಚಾರಕ ಭತ್ಯೆ ಪಾವತಿಸಲಾಗಿದೆ. ಆದರೆ ಪಾವತಿಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು ಕಛೇರಿ ಆದೇಶದೊಂದಿಗೆ ವಾರ್ಷಿಕ ಆಯವ್ಯಯದಲ್ಲಿ ಸೇರಿಸಿ ಅನುಮೋದನೆ ಪಡೆಯಬೇಕಾಗಿದ್ದು, ಯಾವುದೇ ರೀತಿಯ ಅನುಮೋದನೆ ಪಡೆದಿರುವ ಆದೇಶದ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಹಾಗೂ ಬೋಧನಾ ಸಿಬ್ಬಂದಿಯ ಯು.ಜಿ.ಸಿ ವೇತನ ಪಡೆಯುತ್ತಿರುವ ಕುಲಸಚಿವರು ರಾಜ್ಯ ವೇತನಕ್ಕೆ ಒಳಪಡದ ಕಾರಣ ಯು.ಜಿ.ಸಿ ವೇತನ ಪಡೆಯುತ್ತಿರುವುದರಿಂದ ಸಿಂಡಿಕೇಟ್ ಸಭೆಯ ಪೂರ್ವಾನುಮತಿ ಪಡೆಯದೆ ಸರ್ಕಾರದ ಅನುಮತಿ ಪಡೆಯದೆ ನಿಯಮಬಾಹಿರವಾಗಿ ಪಾವತಿಸಲಾಗಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ಅಧ್ಯಾಯ–1 ಪರಿಭಾಷೆಗಳು, ಪರಿಶಿಷ್ಟ – 1 (ನಿಯಮ) 8 (21) ರಲ್ಲಿ ಇಲಾಖಾ ಮುಖ್ಯಸ್ಥರೆಂದು ಘೋಷಿಸಿರುವ ಆದೇಶ ಪ್ರತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪ್ರತಿ ಮತ್ತು ಸರ್ಕಾರದ ಅನುಮತಿ ಪಡೆಯದೆ ನಿಯಮಬಾಹಿರವಾಗಿ ಪಾವತಿಸಿರುವ ಮೊಬಲಗು ರೂ. 60000/– ಗಳನ್ನು ವಸೂಲಿಸಲು ಕ್ರಮತೆಗೆದುಕೊಳ್ಳಲು ಸೂಚಿಸಿದೆ. ಪಾವತಿಯ ವಿವರಗಳು ಕೆಳಕಂಡಂತಿದೆ.

ಕ್ರ.ಸಂ	ವಿವರ	ಅವಧಿ	ಪಾವತಿಸಿರುವ ಮೊಬಲಗು
1.	ಕುಲಸಚಿವರು (ಆಡಳಿತ)	4/2016 ರಿಂದ 8/2016 ರ ಮಾಹೆಯ ವರೆಗೆ 5 ತಿಂಗಳು x 3000 = 9/2016 ರಿಂದ 3/2017 ರ ಮಾಹೆಯ ವರೆಗೆ 7 ತಿಂಗಳು x 3000 =	15000 21000
2.	ಕುಲಸಚಿವರು (ಪರೀಕ್ಷಾಂಗ)	4/2016 ರಿಂದ 3/2016 ರ ಮಾಹೆಯವರೆಗೆ 4 ತಿಂಗಳು x 3000 =	12000
3.	ಹಣಕಾಸು ಅಧಿಕಾರಿ	4/2016 ರಿಂದ 7/2016 ರ ಮಾಹೆಯವರೆಗೆ 4 ತಿಂಗಳು x 3000 =	12000
		ಒಟ್ಟು	**60000**

ಅನುಪಾಲನ ವರದಿ

ಸರ್ಕಾರದ ಆದೇಶ ಸಿಅಸುಇ 232/ಸಿಸೇನಿ/2011 ದಿನಾಂಕ : 22.10.2011 ರಂತೆ ಹಾಗೂ ಮೈಸೂರು ವಿಶ್ವವಿದ್ಯಾಲಯದ ಆದೇಶ ಇಟಿ 5/162/1991–92 ದಿನಾಂಕ :16.03.2012 ರ ಗೃಹಪರಿಚಾರಕ ಭತ್ಯೆ ನೀಡಿರುವುದನ್ನು ಕ್ರಮವಹಿಸಲಾಗಿದೆ.

ದಿನಾಂಕ: 12.07.2014 ರಂದು ನಡೆದ ಪ್ರಶಾಸನ ಸಭೆಯ ನಡಾವಳಿ ಕಂಡಿಕೆ 10ರಲ್ಲಿ ಸಭೆಯು ಪರಿಶೀಲಿಸಿ ಮೈಸೂರು ವಿಶ್ವವಿದ್ಯಾಲಯದಲ್ಲಿ ನೀಡುತ್ತಿರುವ ಗೃಹಪರಿಚಾರಿಕ ಭತ್ಯೆಯನ್ನು ನಮ್ಮ ವಿಶ್ವವಿದ್ಯಾಲಯದಲ್ಲಿ ಅಳವಡಿಸಿ ಹಾಗೂ ಸರ್ಕಾರದ ಆದೇಶದನ್ವಯ ಗೃಹಪರಿಚಾರಕ ಭತ್ಯೆ ಪಾವತಿಸುವಂತೆ ಸಭೆಯು ಒಪ್ಪಿಗೆ ಸೂಚಿಸಿ ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ ಸದರಿ ಭತ್ಯೆ ಪಾವತಿಗೆ ಕ್ರಮವಹಿಸಲಾಗಿದೆ. ಆದ್ದರಿಂದ 2016–17 ನೇ ಸಾಲಿನಲ್ಲಿ ಪಾವತಿಸಿರುವ ಆಕ್ಷೇಪಣೆ ಮೊತ್ತ ರೂ 60,000/–ಗಳನ್ನು ಮನ್ನಾ ಮಾಡಿ ಕಂಡಿಕೆ ತೀರುವಳಿ ಮಾಡಲು ಕೋರಲಾಗಿದೆ. ಪ್ರಶಾಸನ ಸಭಾ ನಡಾವಳಿಗಳನ್ನು ಮಾಹಿತಿಗಾಗಿ ಲಗತ್ತಿಸಿದೆ.

20. ವಿಶ್ವವಿದ್ಯಾಲಯದ ಕುಲಪತಿ/ಕುಲಸಚಿವರ ಮೇಲೆ ಹೂಡಲಾದ ದಾವೆಗಳಿಗೆ ಪ್ರತಿನಿಧಿಸಿದ್ದ ವಕೀಲರಿಗೆ ಸಂಭಾವನೆ ಮೊತ್ತ ರೂ. 1,18,000/– ಗಳನ್ನು ಪಾವತಿಸಿರುವುದು :

2016–17 ನೇ ಸಾಲಿನಲ್ಲಿ ವಿಶ್ವವಿದ್ಯಾಲಯ ಕುಲಪತಿ/ಕುಲಸಚಿವರು ಮೇಲೆ ಹೂಡಲಾದ ದಾವೆಗಳಿಗೆ ಪ್ರತಿನಿದಿಸಿದ್ದ ವಕೀಲರಿಗೆ ಕೆಳಕಂಡಂತೆ ಸಂಭಾವನೆಯನ್ನು ಪಾವತಿಸಲಾಗಿದೆ.

ಕ್ರ. ಸಂ	ದಾವೆ ಸಂಖ್ಯೆ / ದಿನಾಂಕ	ವಕೀಲರ ಹೆಸರು	ಆದೇಶ ಸಂಖ್ಯೆ ದಿನಾಂಕ
1.	ದಾವೆ ಸಂಖ್ಯೆ : WP:44995/2016	ಶ್ರೀ ಶಿವಾನಂದ್	ಕೆ.ಎಸ್.ಜಿ.ಹೆಚ್/ಸಂಪ್ರ ಕವಿ/138/16–17 ದಿನಾಂಕ :20.09.2016
2.	ಕ್ರಿಮಿನಲ್ ದಾವೆ ಸಂಖ್ಯೆ : CP No 628/2016	ಶ್ರೀ ಶಿವಾನಂದ್	ಕೆ.ಎಸ್.ಜಿ.ಹೆಚ್/ಸಂಪ್ರ ಕವಿ/138/16–17 ದಿನಾಂಕ :20.09.2016
3.	ದಾವೆ ಸಂಖ್ಯೆ:WP No 44995/2016	ಶ್ರೀ ಬಸವರಾಜು	ಕೆ.ಎಸ್.ಜಿ.ಹೆಚ್/ಸಂಪ್ರಕವಿ/157/17–18 ದಿನಾಂಕ :13.07.2017
4.	ದಾವೆ ಸಂಖ್ಯೆ:WP No 27815/2015	ಶ್ರೀ ಬಸವರಾಜು	ಕೆ.ಎಸ್.ಜಿ.ಹೆಚ್/ಸಂಪ್ರಕವಿ/157/17–18 ದಿನಾಂಕ :13.07.2017
5.	ದಾವೆ ಸಂಖ್ಯೆ:WP No 38766/2014	ಶ್ರೀನಾಗರಾಜರಾವ್	

ಮೇಲಿನಂತೆ ದಾವೆಗಳಿಗೆ ವಕೀಲರನ್ನು ವಿಶ್ವವಿದ್ಯಾಲಯದಿಂದ ನೇಮಕ ಮಾಡಿಕೊಂಡು ಸಂಭಾವನೆಯನ್ನು ಪಾವತಿಸಲಾಗಿದೆ. ಸಂಬಂಧಿಸಿದ ಕಡತವನ್ನು ಪರಿಶೀಲಿಸಿದಾಗ ಕೆಳಕಂಡ ಅಂಶಗಳನ್ನು ಗಮನಿಸಲಾಗಿದ್ದು ಸೂಕ್ತ ವಿವರಣೆಯನ್ನು ನೀಡುವಂತೆ ಸೂಚಿಸಿದೆ. ವಿಶ್ವವಿದ್ಯಾಲಯದ ಪತ್ರ ಸಂಖ್ಯೆ : ಕೆಎಸ್‌ಜಿಎಚ್/ಸಂಪ್ರಕವಿ/ಕುಪಶಾ–167/2016–17 ದಿನಾಂಕ : 24.02.2017 ರಲ್ಲಿ ದಾವೆ ಸಂಖ್ಯೆ : 6268/2016 ಮತ್ತು ದಾವೆ ಸಂಖ್ಯೆ 44995/2016 ಈ ಎರಡು ಪ್ರಕರಣಗಳಿಗೆ ವಿಶ್ವವಿದ್ಯಾಲಯದ ಪರವಾಗಿ ಉಚ್ಚನ್ಯಾಯಾಲಯದಲ್ಲಿ ವಾದಿಸಲು ಶ್ರೀ ಶಿವಾನಂದ್ ಅವರನ್ನು ವಕೀಲರನ್ನಾಗಿ ನೇಮಿಸಿ ವಕೀಲರ ಸೇವಾ ಶುಲ್ಕವನ್ನು ವಿಶ್ವವಿದ್ಯಾಲಯ ಭರಿಸುವುದಕ್ಕೆ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಇದಕ್ಕುತ್ತರವಾಗಿ ಸರ್ಕಾರದ ಪತ್ರ ಸಂಖ್ಯೆ ಇಡಿ /107/ಯುಎನ್‌ಇ/2016 ದಿನಾಂಕ : 04.05.2017 ರಲ್ಲಿ ಪ್ರತಿನಿಧಿಸಿರುವ ವಕೀಲರಿಗೆ ಸಂಭಾವನೆ ಪಾವತಿಸಲು ಎರಡು ದಾವೆ ಸಂಖ್ಯೆಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರವು ಸಹಮತಿ ನೀಡಿದೆ. ಆದರೆ ಪಾವತಿ ವಿವರಗಳನ್ನು ಪರಿಶೀಲಿಸಿದಾಗ ಉಳಿದ ದಾವೆ ಸಂಖ್ಯೆ.

W.P.No.36177/14	25000
W.P No.27815/15 (Review)	25000
W.P No. 38766/14	45000
Total	95000

ಅನುಪಾಲನ ವರದಿ

ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾದ ಶ್ರೀ ಬಸವರಾಜುರವರಿಗೆ ಮೊಕದ್ದಮೆ ಸಂಖ್ಯೆ :449955/2016 ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಿನಾಂಕ : 22.08.2016 ರಂದು ವಾದ ಮಾಡಲು ನೇಮಕ ಮಾಡಲಾಯಿತು.

ಮುಂದುವರಿದು, ಉಚ್ಚನ್ಯಾಯಾಲಯದ ದಾವೆ ಸಂಖ್ಯೆ : Criminal petition No : 6268/2016 ರಂದು ಮೊಕದ್ದಮೆ ಪ್ರತಿವಾದಿಯಾಗಿ ವಿಶ್ವವಿದ್ಯಾಲಯದ ಕುಲಪತಿಗಳಿಗೆ ನೋಟಿಸ್ ಜಾರಿ ಮಾಡಲಾಯಿತು. ವಿಶ್ವವಿದ್ಯಾಲಯದ ಪರವಾಗಿ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಲು ಸೂಚಿಸಿರುತ್ತಾರೆ. ವಿಶ್ವವಿದ್ಯಾಲಯದ ಕುಲಪತಿ ಪರವಾಗಿ ಉಚ್ಚನ್ಯಾಯಾಲಯದಲ್ಲಿ ಕ್ರಿಮಿನಲ್ ವಕೀಲರು ಶ್ರೀ ಬಸವರಾಜು ಸೇವಾ ತಕರಾರಿಗೆ ಸಂಬಂಧಿಸಿದ ವಕೀಲರಾಗಿದ್ದು, ಕ್ರಿಮಿನಲ್ ವಕೀಲರಾಗಿರುವುದಿಲ್ಲ. ಈ ಹಿನ್ನಲೆಯಲ್ಲಿ ಕುಲಪತಿಗಳ ಪರವಾಗಿ ಸಮರ್ಥವಾದ ವಾದ ಮಾಡಲು ಬೆಂಗಳೂರಿನ ಲಾ ಅಸೋಸಿಯೇಷನ್ ಪಾಲುದಾರ ಹಿರಿಯ ವಕೀಲರಾದ ಶ್ರೀ ಎಸ್. ಶಿವಾನಂದರವರನ್ನು ವಿಶ್ವವಿದ್ಯಾಲಯದ ಪರವಾಗಿ ಕ್ರಿಮಿನಲ್ ಮೊಕದ್ದಮೆ ದಾವೆ ಸಂಖ್ಯೆ : 6268/2016 ಯನ್ನು ಕಛೇರಿ ಆದೇಶ ದಿನಾಂಕ : 20.09.2016 ರಲ್ಲಿ ವಾದ ಮಾಡಲು ಆದೇಶಿಸಲಾಯಿತು. ಇದಕ್ಕೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಗೆ ಶುಲ್ಕವನ್ನು 2017–18 ರಲ್ಲಿ ಪಾವತಿಸಲಾಯಿತು. ಆದ್ದರಿಂದ 1,18,000/– ರೂಗಳ ಆಕ್ಷೇಪಣೆ ಮೊತ್ತವನ್ನು ತೀರುವಳಿ ಮಾಡಬೇಕೆಂದು ಕೋರಿದೆ.

ಗಳಿಗೆ ಪ್ರತಿನಿದಿಸಿದ್ದ ವಕೀಲರಿಗೆ ಸಂಭಾವನೆ ಪಾವತಿಸಲು ಸರ್ಕಾರದ ಅನುಮೋದನೆ ನೀಡಿರುವ ಆದೇಶವಿರುವುದಿಲ್ಲ. ಅನುಮೋದನೆ ಪ್ರತಿಯನ್ನು ಲೆಕ್ಕ ತನಿಖೆಗೆ ಒದಗಿಸುವುದು. ಸರ್ಕಾರಕ್ಕೆ ಬರೆದ ಪತ್ರದ ಪ್ರತಿಯಲ್ಲಿರುವಂತೆ ವಕೀಲರ ಸಂಭಾವನೆಯನ್ನು ಶ್ರೀ ಶಿವಾನಂದ್, ವಕೀಲರು ರವರ ಬದಲಾಗಿ ಶ್ರೀ ಬಸವರಾಜು, ವಕೀಲರಿಗೆ ಪಾವತಿಸಿರುವುದಕ್ಕೆ ಸೂಕ್ತ ವಿವರಣೆ ಕೋರಿದೆ. ಸರ್ಕಾರದ ಆದೇಶ ಪ್ರತಿ ಮತ್ತು ನೇಮಕಗೊಂಡಿಲ್ಲದ ವಕೀಲರಿಗೆ ಪಾವತಿಸಲಾದ ಸಂಭಾವನೆ ವಿವರಣೆ ಒದಗಿಸುವವರೆಗೆ (ರೂ. 95000 + 23000 –= 118000/–) ಒಟ್ಟು ರೂ. 1,18,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಪಾವತಿ ವಿವರಗಳನ್ನು ಅನುಬಂಧ–6 ರಲ್ಲಿ ನೀಡಿದೆ.	

21. ಕೆ.ಸಿ.ಎಸ್.ಆರ್ ನಿಯಮ ಉಲ್ಲಂಘಿಸಿ ರೂ. 75,534/– ಪ್ರಯಾಣಭತ್ಯೆಯನ್ನು ಪಾವತಿಸಿರುವುದು : ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇಲ್ಲಿನ ನವೆಂಬರ್/ಡಿಸೆಂಬರ್ 2016 ರ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಮಂಡಳಿಯ ವಿಷಯ ಪರಿಣಿತರಿಗೆ ವಿವಿಧ ಭತ್ಯೆಗಳನ್ನು ಹಾಗೂ ಜನವರಿ 2017 ರ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷಕರಿಗೆ ವಿವಿಧ ಭತ್ಯೆಗಳನ್ನು ಪಾವತಿಸಲಾಗಿದ್ದು, ಪ್ರಯಾಣ ಭತ್ಯೆಯನ್ನು ಕಿ.ಮೀ ಗೆ ರೂ. 4/– ರಂತೆ ನೀಡಿದ್ದು, ಒಟ್ಟು ರೂ. 67,200/– ಗಳನ್ನು ಪಾವತಿಸಲಾಗಿರುವುದು ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ವಿವರವನ್ನು ಅನುಬಂಧ – 7 ರಲ್ಲಿ ನೀಡಲಾಗಿದೆ. ಕೆ.ಸಿ.ಎಸ್.ಆರ್ ಪ್ರಯಾಣ ಭತ್ಯೆ ನಿಯಮ 451 ಮತ್ತು ಸರ್ಕಾರದ ಆದೇಶ ಸಂಖ್ಯೆ : ಆಇ/3/ಸೇನಿಸೇ/2012 ದಿನಾಂಕ : 14.06.2012 ರ ಕಂಡಿಕೆ (11.1) ರ ಪ್ರಕಾರ ಪ್ರತಿ ಕಿ.ಮೀ ಗೆ ರೂ. 2/– ರಂತೆ ಪ್ರಯಾಣ ವೆಚ್ಚವನ್ನು ನೀಡಬೇಕಾಗಿರುತ್ತದೆ. ವಿಚಾರಣೆ ಸಂಖ್ಯೆ : 7/27.09.2018 ರಲ್ಲಿ ನಿಯಮಬಾಹಿರವಾಗಿ ಹೆಚ್ಚುವರಿ ಪ್ರಯಾಣಭತ್ಯೆ ವೆಚ್ಚವನ್ನು ಪಾವತಿಸಿರುವುದಕ್ಕೆ ವಿವರಣೆಯನ್ನು ನೀಡಲು ಕೋರಲಾಗಿತ್ತು. ಇದಕ್ಕೆ ಸಂಬಂಧಿಸಿದ ಅನುಪಾಲನಾ ವರದಿಯಲ್ಲಿ ಪ್ರಶಿಕ್ಷಣ ಪರಿಷತ್ ಸಭೆಯಲ್ಲಿ ಅನುಮೋದಿಸಲಾದ ಪ್ರತಿಯನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ. ಇದು Statute ಅನುಮೋದನೆ ಆಗಿಲ್ಲದ ಕಾರಣ ನಿಯಮವನ್ನು ಮೀರಿ ಪಾವತಿಸಲಾಗಿರುವ ಹೆಚ್ಚುವರಿ ಪ್ರಯಾಣ ಭತ್ಯೆ ಮೊತ್ತ ರೂ. 75534/– ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ	**ಅನುಪಾಲನ ವರದಿ** ಪರೀಕ್ಷಾ ಮಂಡಳಿಯ ವಿಷಯ ಪರಿಣಿತರಿಗೆ ದಿನಾಂಕ : 17.03.2016 ರಂದು ನಡೆದ 6ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯ ಕಂಡಿಕೆ ನಿರ್ಣಯ 6.08 ರ ರೀತ್ಯಾ ಕಿ.ಮೀ 4/– ರೂ ನಂತೆ ಪಾವತಿಗೆ ಕ್ರಮವಹಿಸಲಾಗಿದೆ. ಮಾಹಿತಿಗಾಗಿ ಪ್ರಶಿಕ್ಷಣ ಸಮಿತಿ ಸಭೆಯ ಪ್ರತಿಯನ್ನು ಲಗತ್ತಿಸಿದೆ. ಈ ವಿಶ್ವವಿದ್ಯಾಲಯವು ಒಂದು ವಿಶಿಷ್ಟ ಸ್ವಯಂ ಸಂಸ್ಥೆಯಾಗಿದ್ದು, ಪರೀಕ್ಷಾ ಕಾರ್ಯಗಳಿಗೆ ಸಂಗೀತದ ಪ್ರಾಧ್ಯಾಪಕರುಗಳನ್ನು ಅಹ್ವಾನಿಸಲಾಗಿದ್ದು ಕಡಿಮೆ ಅಂದರೆ ಕೆ.ಸಿ.ಎಸ್.ಆರ್ ನಂತೆ ಪಾವತಿಸಿದರೆ ವಿಶ್ವವಿದ್ಯಾಲಯದ ಕಾರ್ಯಗಳಿಗೆ ಸದರಿಯವರು ಭಾಗಿಯಾಗುವುದಿಲ್ಲ ಆದ್ದರಿಂದ ವಿ.ವಿ ಕಲಾಪಕ್ಕೆ ಅಡಚಣೆಯಾಗುವುದರಿಂದ ಪ್ರಶಿಕ್ಷಣ ಸಭೆಯ ಅನುಮತಿ ಪಡೆದು ಪಾವತಿಗೆ ಕ್ರಮವಹಿಸಲಾಗಿದೆ. ಈ ಹಿನ್ನಲೆಯಲ್ಲಿ ವಸೂಲಾತಿಗೆ ನೀಡಿರುವ ಮೊತ್ತ ರೂ. 75534.00 ಗಳನ್ನು ತೀರುವಳಿ ಮಾಡುವಂತೆ ಕೋರಿದೆ.

22. ಪರೀಕ್ಷಾ ಖಾತೆಗೆ ಸಂಬಂಧಿಸಿದಂತೆ ವಿವಿಧ ಭತ್ಯೆಗಳನ್ನು ವಿಶ್ವವಿದ್ಯಾಲಯದಲ್ಲಿ ನಿಗದಿಗೊಳಿಸದೆ ರೂ. 7,900/– ಗಳನ್ನು ಪಾವತಿಸಿರುವ ಕುರಿತು :–	ಅನುಪಾಲನ ವರದಿ
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇಲ್ಲಿ ಜೂನ್ – ಜುಲೈ 2016 ರ ಮಾಹೆಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ವಿವಿಧ ಭತ್ಯೆಗಳನ್ನು ಪಾವತಿಸಲಾಗಿದ್ದು, ಇದರಲ್ಲಿ ಸಂಪ್ರಬಂಧದ (Dissertation) ಮೌಖಿಕ ಪರೀಕ್ಷೆಗಾಗಿ ಪ್ರತಿ ವಿದ್ಯಾರ್ಥಿಗರ ರೂ. 100/– ರಂತೆ ಹಾಗೂ ಸಂಪ್ರಬಂಧದ ಮೌಲ್ಯಮಾಪನಕ್ಕಾಗಿ ಪ್ರತಿ ವಿದ್ಯಾರ್ಥಿಗೆ ರೂ. 100/– ರಂತೆ ಮೌಲ್ಯಮಾಪಕರಿಗೆ ಭತ್ಯೆಯನ್ನು ಹಾಗೂ ಕೊಠಡಿ ಮೇಲ್ವಿಚಾರಕರ ಭತ್ಯೆ ರೂ. 100/– ರಂತೆ ನೀಡಲಾಗಿರುವುದು ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ವಿಚಾರಣೆ ಸಂಖ್ಯೆ : 5/ ದಿನಾಂಕ : 18.09.2018 ರಲ್ಲಿ ಸಂಬಂಧಿಸಿದ ಆದೇಶದ ಪ್ರತಿಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸಲು ಕೋರಲಾಗಿತ್ತು. ನೀಡಲಾಗಿರುವ ಅನುಪಾಲನಾ ವರದಿಯಲ್ಲಿ ವಿಶ್ವವಿದ್ಯಾಲಯದಲ್ಲಿ ನಿಗದೀಕರಣಗೊಂಡಿಲ್ಲದ ಸಂದರ್ಭದಲ್ಲಿ ಭತ್ಯೆಗಳನ್ನು ಮೈಸೂರು ವಿಶ್ವವಿದ್ಯಾಲಯದ ಭತ್ಯೆಗಳನುಸಾರ ಪಾವತಿಸಲಾಗುತ್ತಿದೆಯೆಂದು ತಿಳಿಸಿರುತ್ತಾರೆ. ಮೇಲ್ಕಂಡಂತೆ ಭತ್ಯೆಗಳನ್ನು ಪಾವತಿಸಿರುವ ಕುರಿತು ಕುಲಾಧಿಪತಿಗಳಿಂದ ಅನುಮೋದಿಸಿದ ಆದೇಶದ ಪ್ರತಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವವರೆಗೆ ಪಾವತಿಸಿರುವ ಮೊತ್ತ ರೂ. 7,900/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ – 8 ರಲ್ಲಿ ನೀಡಿದೆ.	ಸಂಬಂಧಿಸಿದ ಓಚರ್ ಅನ್ನು ಸಲ್ಲಿಸಲಾಗಿದೆ. ಸಂಬಂಧಿಸಿದ ವಿವರಗಳನ್ನು ಸಲ್ಲಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದಲ್ಲಿ ಯಾವುದೇ ಭತ್ಯೆ ನಿಗಧೀಕರಣ ಗೊಂಡಿಲ್ಲದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ಭತ್ಯೆಗಳನುಸಾರ ಪಾವತಿಸಲಾಗುತ್ತಿದೆ. ಮುಂದುವರೆದು, ಈ ಪಾವತಿಗಳಿಗೆ 4ನೇ ಪ್ರಶಿಕ್ಷಣ ಪರಿಷತ್ ಸಭೆಯ ಕಂಡಿಕೆ ಸಂಖ್ಯೆ: 2015/4.20 ಹಾಗೂ 12ನೇ ಪ್ರಶಾಸನ ಸಭೆಯ ಕಂಡಿಕೆ ಸಂಖ್ಯೆ : 2015/12.14 ರಲ್ಲಿ ಅನುಮೋದನೆ ಪಡೆಯಲಾಗಿದೆ. ಹಾಗೂ 8ನೇ ಪ್ರಶಿಕ್ಷಣ ಪರಿಷತ್ ಸಭೆಯಲ್ಲೂ ಸಹ ಒಟ್ಟಾರೆಯಾಗಿ ಜೂನ್ – ಜುಲೈ 2016 ರ ಪರೀಕ್ಷಾ ಖರ್ಚು – ವೆಚ್ಚಗಳಿಗೆ ಅನುಮೋದನೆ ಪಡೆಯಲಾಗಿದೆ ಹಾಗೂ ಕೊಠಡಿ ಮೇಲ್ವಿಚಾರಕರ ಭತ್ಯೆಗಳನ್ನು ಭರಿಸಲು ಅನುಮೋದನೆ ಪಡೆಯಲಾಗಿದೆ. ಸಂಬಂಧಿಸಿದ ಪ್ರತಿಗಳನ್ನು ಲಗತ್ತಿಸಲಾಗಿದೆ. ಆದ್ದರಿಂದ ಆಕ್ಷೇಪಣೆ ಮೊತ್ತ 7900 ರೂ ಗಳನ್ನು ತೀರುವಳಿ ಮಾಡುವಂತೆ ಕೋರಿದೆ.

23. ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ ಘಟಿಕೋತ್ಸವ ಶುಲ್ಕ ಪಾವತಿಸಿರುವ ಬ್ಯಾಂಕ್ ಚಲನ್‌ಗಳು ಲಭ್ಯವಿಲ್ಲದಿರುವುದು :	ಅನುಪಾಲನ ವರದಿ
ಸಂಗೀತ ವಿಶ್ವವಿದ್ಯಾಲಯದ 2016–17 ನೇ ಸಾಲಿನ ಬಿ.ಎ, ಎಂ.ಎ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ ಹಾಗೂ ಘಟಿಕೋತ್ಸವ ಶುಲ್ಕಗಳನ್ನು ಪಾವತಿಸಿರುವ ಬ್ಯಾಂಕ್ ಚಲನ್‌ಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ 6/2016, 8/2016, 12/2016, 1/2017 ಹಾಗೂ 3/2017 ರ ಮಾಹೆಯಲ್ಲಿನ ಕೆಲವು ಶುಲ್ಕ ಪಾವತಿ ಬ್ಯಾಂಕ್ ಚಲನ್‌ಗಳು ಪರಿಶೀಲನೆಗೆ ಲಭ್ಯವಿರುವುದಿಲ್ಲ. ಈ ಕುರಿತು ವಿಚಾರಣೆ ಸಂಖ್ಯೆ 15/ದಿನಾಂಕ : 14.10.2018 ರಲ್ಲಿ ಕೋರಲಾಗಿರುವ ಬ್ಯಾಂಕ್ ಚಲನ್‌ಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಲು ತಿಳಿಸಲಾಗಿತ್ತು. ಲೆಕ್ಕ ತಪಾಸಣೆಗೆ ಅವಶ್ಯಕವಾಗಿರುವ ಶುಲ್ಕ ಪಾವತಿಸಿರುವ ಬ್ಯಾಂಕ್ ಚಲನ್ ಇತ್ಯಾದಿ ದಾಖಲಾತಿಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಸೂಚಿಸಿದೆ.	ಶುಲ್ಕ ಪಾವತಿಯ ಬ್ಯಾಂಕ್ ಚಲನ್‌ಗಳನ್ನು ಹಾಗೂ ಇನ್ನಿತರ ದಾಖಲಾತಿಗಳನ್ನು ಇನ್ನು ಮುಂದೆ ಕ್ರಮಬದ್ಧವಾಗಿ ನಿರ್ವಹಿಸಲು ಕ್ರಮವಹಿಸಲಾಗುವುದು.

24. ಅಭಿವೃದ್ಧಿ ಅನುದಾನ ಖಾತೆಗೆ ಸಂಬಂಧಿಸಿದ ಮುಂಗಡ ಬಿಲ್ಲುಗಳಲ್ಲಿ ಕಂಡುಬಂದಿರುವ ನ್ಯೂನತೆಗಳು :	ಅನುಪಾಲನ ವರದಿ
ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 2016–17 ನೇ ಸಾಲಿನಲ್ಲಿ ಅಭಿವೃದ್ಧಿ ಅನುದಾನ ಖಾತೆಗೆ ಸಂಬಂಧಿಸಿದ ಎಸಿ ಬಿಲ್ಲು/ಎನ್‌ಡಿಸಿ ಬಿಲ್ಲುಗಳನ್ನು ಪರಿಶೀಲಿಸಿದಾಗ ಕಂಡುಬಂದಿರುವ ನ್ಯೂನತೆಗಳನ್ನು ಅನುಬಂಧ – 9 ರಲ್ಲಿ ನೀಡಲಾಗಿದೆ. ಮುಂಗಡ ಬಿಲ್ಲುಗಳಲ್ಲಿ ಪಡೆದ ಹಣದಲ್ಲಿ ಖರ್ಚಾಗದೆ ಉಳಿದ ಮೊತ್ತವನ್ನು ವಿಳಂಬವಾಗಿ ಸಂಬಂಧಿಸಿದ ಖಾತೆಗೆ ಜಮೆ ಮಾಡಲಾಗಿರುತ್ತದೆ ಹಾಗೂ ಮುಂಗಡ ಪಡೆದ ಮೊತ್ತಕ್ಕಿಂತ ಹೆಚ್ಚುವರಿ ವೆಚ್ಚವನ್ನು ಭರಿಸಲಾಗಿರುವುದು ಕಂಡುಬಂದಿರುತ್ತದೆ. ಮುಂಗಡ ಬಿಲ್ಲು/ಹೊಂದಾಣಿಕೆ ಬಿಲ್ಲುಗಳಲ್ಲಿ MCE-36 & 37 ರಂತೆ ನಿಯಮಗಳ ಪಾಲನೆಯಾಗದಿರುವುದರಿಂದ ವಿಚಾರಣೆ ಸಂಖ್ಯೆ : 20/ದಿನಾಂಕ : 06.10.2018 ರಲ್ಲಿ ಸದರಿ ನ್ಯೂನತೆಗಳಿಗೆ ಸೂಕ್ತ ವಿವರಣೆಯನ್ನು ಕೋರಲಾಗಿತ್ತು. ಅನುಪಾಲನಾ ವರದಿಯಲ್ಲಿ ನೀಡಿರುವ ಉತ್ತರವು ಸಮಂಜಸವಾಗಿಲ್ಲದಿರುವುದರಿಂದ ಮುಂಗಡ ನೀಡಲಾಗಿರುವ ಒಟ್ಟು ಮೊತ್ತ ರೂ. 51,500/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ	1) ಭ್ರಷ್ಟಾಚಾರ ನಿಗ್ರಹದಲ್ಲಿ ನಾಗರೀಕರ ಪಾತ್ರ ವಿಶೇಷ ಉಪನ್ಯಾಸಕ್ಕೆ ನೀಡಿದ ವೆಚ್ಚದ ಬಾಬ್ತು 4000 ರೂ ಮುಂಗಡ ನೀಡಿದ್ದು ರೂ ಮೂರು ಸಾವಿರ (3000) ವೆಚ್ಚ ಭರಿಸಿ 1000 ರೂಗಳನ್ನು ವಿಳಂಬವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡಿರುವುದು 2) 18 ನೇ ಪ್ರಶಾಸನ ಸಭೆ ಕಾರ್ಯಕ್ರಮಕ್ಕೆ 17000 ರೂ ಮುಂಗಡ ಪಡೆದು 8500 ವೆಚ್ಚ ಭರಿಸಿ 8500 ವಿಳಂಬವಾಗಿ ಜಮಾ ಮಾಡಲಾಗಿದೆ. ಮೇಲೆ ತಿಳಿಸಿರುವ ವಿಳಂಬಕ್ಕೆ ಸಂಭಂದಪಟ್ಟ ವಿಷಯ ನಿರ್ವಾಹಕರಿಗೆ ತಿಳಿವಳಿಕೆ ನೋಟೀಸ್ ನೀಡಿ ಮುಂದೆ ವಿಳಂಬಕ್ಕೆ ಅವಕಾಶ ನೀಡದಂತೆ. ಮುಂಗಡ ತೀರುವಳಿ ಮಾಡುವಂತೆ ಎಚ್ಚರ ನೀಡಲಾಗಿದೆ. 68ನೇ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ 4000 ಮುಂಗಡ ನೀಡಿದ್ದು ಹೆಚ್ಚುವರಿಯಾಗಿ 317 ವೆಚ್ಚಭರಿಸಲಾಗಿದೆ. 3) ಶ್ರೀ ತ್ಯಾಗರಾಜರ ಮತ್ತು ಪುರಂದರದಾಸರ ಆರಾಧನಾ ಕಾರ್ಯಕ್ರಮದಲ್ಲಿ ಮುಂಗಡ ಪಡೆದು1,652 ರೂ ಹೆಚ್ಚುವರಿಯಾಗಿ ವೆಚ್ಚ ಭರಿಸಲಾಗಿದೆ. ಈ ರೀತಿ ಹೆಚ್ಚುವರಿ ವೆಚ್ಚ ಭರಿಸದಂತೆ ಮುಂದೆ ಕ್ರಮವಹಿಸಲು ಸಂಬಂಧಪಟ್ಟವರಿಗೆ ಎಚ್ಚರಿಕೆ ನೀಡಲಾಗಿದೆ. 4) 8ನೇ ಪ್ರಶಾಸನ ಸಭೆಯ ವೆಚ್ಚ 6500 ರೂ ಓಚರ್ ಬದಲಾಗಿ 1650 ರೂ ಓಚರ್ ನೀಡಿರುವ ಬಗ್ಗೆ ಪರಿಶೀಲಿಸಿ ಸದರಿ ಓಚರ್ ಲಗತ್ತಿಸಿದೆ. ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ನೀವು ತಿಳಿಸಿರುವ ಅಂಶಗಳನ್ನು ಪರಿಗಣಿಸಿ. ಇನ್ನು ಮುಂದೆ MCE 36–37 ನಿಯಮ ಪಾಲನೆ ಮಾಡುವ ಬಗ್ಗೆ ಕ್ರಮವಹಿಸಲಾಗುವುದು ಎಂದು ತಿಳಿಸಿ ಸದರಿ ಕಂಡಿಕೆಯ ಮೊತ್ತ 51500/– ರೂಗಳ ಆಕ್ಷೇಪಣೆ ಮೊತ್ತವನ್ನು ತೀರುವಳಿ ಮಾಡಿಕೊಡಬೇಕೆಂದು ಕೋರಲಾಗಿದೆ.

25. 2016–17ನೇ ಸಾಲಿನಲ್ಲಿ ಭದ್ರತಾ ಸಿಬ್ಬಂದಿಗಳ ವೇತನ ಪಾವತಿ ಬಿಲ್ಲುಗಳಲ್ಲಿ ಕಂಡುಬಂದಿರುವ ನ್ಯೂನತೆಗಳು :	ಅನುಪಾಲನ ವರದಿ
